ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 – 2023

ಬುಧವಾರ, ಜನವರಿ 17, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 245 RNI : 27369/75

janathavani@mac.com
www.janathavani.com
08192 254736 91642 99999

## ಅಯೋಧ್ಯೆ ಶ್ರೀ ರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ ಪೂಜಾ ವಿಧಿಗಳು ಆರಂಭ

ಅಯೋಧ್ಯೆ, ಜ. 16 – ಬರುವ ಜನವರಿ 22ರಂದು ನಡೆಯಲಿರುವ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಮಂಗಳವಾರದಿಂದ ಪೂಜಾ ವಿಧಿಗಳು ಆರಂಭವಾಗಿವೆ.

ಪ್ರಾಣ ಪ್ರತಿಷ್ಠಾಪನೆಗಾಗಿ ಅನುಷ್ಠಾನ ಕಾರ್ಯ ಆರಂಭವಾಗಿದೆ. ಪೂಜಾ ವಿಧಿಗಳು ಜನವರಿ 22ರವರೆಗೂ ಮುಂದುವರೆಯಲಿವೆ. ಹನ್ನೊಂದು ಅರ್ಚಕರು ದೇವಿ - ದೇವತೆಯರ ಅರ್ಚನಾ ಕಾರ್ಯ ನೆರವೇರಿಸಿದರು ಎಂದು ಪ್ರಧಾನ ಅರ್ಚಕ ಸತ್ಯೇಂದ್ರ ದಾಸ್ ಹೇಳಿದರು.

ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರ ಹಾಗೂ ಉಮಾ ಮಿಶ್ರ ದಂಪತಿ ಈ ಪೂಜಾ ಪ್ರಕ್ರಿಯೆಗಳಲ್ಲಿ ಭಾಗಿಯಾಗಿದ್ದರು. ಮಿಶ್ರ ಅವರು ಈ ಕಾರ್ಯಕ್ರಮಗಳಲ್ಲಿ ಯಜಮಾನರಾಗಿ ಪಾಲ್ಗೊಂಡಿದ್ದರು. ಅವರು ಜನವರಿ 22ರಂದು ನಡೆಯಲಿರುವ ಪೂಜಾ ವಿಧಿಗಳಲ್ಲೂ ಭಾಗಿಯಾಗಲಿದ್ದಾರೆ. ಅಂದಿನ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಉಪಸ್ಥಿತರಿರಲಿದ್ದಾರೆ.

ಮಿಶ್ರ ಅವರು ಪೂಜಾ ವಿಧಿ ವಿಧಾನಗಳ ಯಜಮಾನರಾಗುವುದನ್ನು ಖಚಿತ ಪಡಿಸಲಾಗಿದೆ. ಸಾಮಾನ್ಯವಾಗಿ ಗೃಹಸ್ಥರೇ ಈ ಯಜಮಾನರಾಗಿ ಪೂಜಾ ವಿಧಿಗಳನ್ನು ನೆರವೇರಿಸುತ್ತಾರೆ. ಹೀಗಾಗಿ ಪ್ರಧಾನಿ ಮೋದಿ



ಪೂಜಾ ವಿಧಿಗಳ ಯಜಮಾನರಾಗಬಹುದೇ? ಎಂಬ ಪ್ರಶ್ನೆಗಳು ಉದ್ಭವಿಸಿದ್ದವು.

ಜನವರಿ 22ರಂದು ಪ್ರಾಣ ಪ್ರತಿಷ್ಠಾಪನೆ ನೆರವೇರಿದ ನಂತರ ಪ್ರಧಾನಿ ಮೋದಿ ಅವರು ನೆರೆದ 8 ಸಾವಿರಕ್ಕೂ ಹೆಚ್ಚು ಆಹ್ವಾನಿತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಆದರೆ, ಕೆಲವೇ ಜನರಿಗೆ ದೇವಾಲಯದ ಗರ್ಭಗೃಹದಲ್ಲಿ ಪ್ರವೇಶ ಇರಲಿದೆ.

ಪ್ರಾಣ ಪ್ರತಿಷ್ಠಾಪನೆಯಲ್ಲಿ ಏಳು ಆದಿವಾಸಿಗಳಿರಲಿದ್ದಾರೆ. ಇವರಲ್ಲಿ ಕನಿಷ್ಠ ಮೂವರು ಅಂದಿನ ಪೂಜಾ ವಿಧಿಗಳಲ್ಲಿ ಭಾಗಿಯಾಗಲಿದ್ದಾರೆ ಎಂದು ಟ್ರಸ್ಟ್ ಹೇಳಿದೆ.

ಪೂಜಾ ವಿಧಿಗಳನ್ನು 121 ಆಚಾರ್ಯರು ನೆರವೇರಿಸಿ ಕೊಡಲಿದ್ದಾರೆ.

ಮುಂದಿನ ವಾರ ತೀರ್ಥ ಪೂಜೆ, ಜಲ ಯಾತ್ರೆ ಹಾಗೂ ಗಂಧಾಧಿವಸಗಳನ್ನು ಕೈಗೊಳ್ಳಲಾಗುವುದು. ಸೋಮವಾರ ಪ್ರಾಯಶ್ಚಿತ್ತ ಹಾಗೂ ಕರ್ಮಕುಟಿ ಪೂಜೆಗಳು ನೆರವೇರಲಿವೆ.

ಜನವರಿ 22ರ 12.20ರ ವೇಳೆಗೆ ರಾಮ ದೇವಾಲಯದ ಪ್ರಾಣ ಪ್ರತಿಷ್ಠಾಪನೆ ಆರಂಭವಾಗಲಿದೆ. ಮಧ್ಯಾಹ್ನ 1 ಗಂಟೆಗೆ ಪ್ರಾಣ ಪ್ರತಿಷ್ಠಾಪನೆ ಪೂರ್ಣಗೊಳ್ಳಲಿದೆ ಎಂದು ದೇವಾಲಯದ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ತಿಳಿಸಿದ್ದಾರೆ.

## ಸುಧಾರಣೆಗಳಿಂದ ದಾಖಲೆ ತೆರಿಗೆ ಸಂಗ್ರಹ



ಅಮರಾವತಿ, ಜ. 16 – ಕಳೆದ ಹತ್ತು ವರ್ಷಗಳಲ್ಲಿ ಜಾರಿಗೆ ತರಲಾದ ತೆರಿಗೆ ಸುಧಾರಣೆಗಳ ಕಾರಣದಿಂದ ದಾಖಲೆ ಪ್ರಮಾಣದ ತೆರಿಗೆ ಸಂಗ್ರಹವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಶ್ರೀ ಸತ್ಯಸಾಯಿ ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಪ್ರಧಾನಿ, ತೆರಿಗೆದಾರರ ಹಣವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಸಂಗ್ರಹವಾದ ಎಲ್ಲದನ್ನೂ ಜನರಿಗೆ ಬೇರೆ ಬೇರೆ ಸ್ವರೂಪದಲ್ಲಿ ಮರಳಿಸಲಾಗುತ್ತಿದೆ ಎಂದರು.

ಕಳೆದ ಹತ್ತು ವರ್ಷಗಳಲ್ಲಿ ಹಲವಾರು ತೆರಿಗೆ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ. ಈ ಹಿಂದೆ ಹಲವಾರು ರೀತಿಯ ತೆರಿಗೆ ವ್ಯವಸ್ಥೆಗಳಿದ್ದವು. ಜನ ಸಾಮಾನ್ಯರಿಗೆ ಇದು ಸಂಕೀರ್ಣವಾಗಿತ್ತು. ಪಾರದರ್ಶಕತೆಯ ಕೊರತೆಯಿಂದಾಗಿ ಪ್ರಾಮಾಣಿಕ ತೆರಿಗೆದಾರರು ಹಾಗೂ ಉದ್ಯಮಿಗಳು ಸಮಸ್ಯೆ ಎದುರಿಸುತ್ತಿದ್ದರು ಎಂದು ಪ್ರಧಾನಿ ಹೇಳಿದರು.

ಜಿ.ಎಸ್.ಟಿ. ರೂಪದಲ್ಲಿ (4ನೇ ಪುಟಕ್ಕೆ)

## ಮಂಜಿನಿಂದ ವಿಮಾನಗಳ ವಿಳಂಬ

ನವದೆಹಲಿ, ಜ. 16 - ದೇಶದ ಹಲವೆಡೆ ಹರಡಿದ ದಟ್ಟ ಮಂಜಿನ ಕಾರಣದಿಂದಾಗಿ ವಿಮಾನಯಾನ 13 ಗಂಟೆಗಳ ಕಾಲ ವಿಳಂಬವಾಗುತ್ತಿದೆ. ಹಲವಾರು ಪ್ರಯಾಣಿಕರು ಚಿಕ್ಕ ಮಕ್ಕಳೊಂದಿಗೆ ರಾತ್ರಿಯಿಡೀ ವಿಮಾನಕ್ಕಾಗಿ ಕಾಯುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಹಿರಿಯರೂ ಹೆಚ್ಚಿನ ಸಮಸ್ಯೆ ಎದುರಿಸುವಂತಾಗಿದೆ.

ಇಷ್ಟೆಲ್ಲಾ ಕಾದ ನಂತರವೂ ವಿಮಾನದ ಮಾರ್ಗ ಬದಲಿಸುವ ಇಲ್ಲವೇ ವಿಮಾನದ ಹಾರಾಟವನ್ನೇ ರದ್ದುಗೊಳಿಸಿರುವುದಾಗಿ ಘೋಷಿಸಿದ ಘಟನೆಗಳೂ ನಡೆದಿವೆ.



ಉತ್ತರ ಭಾರತ, ಅದರಲ್ಲೂ ದೆಹಲಿಯಲ್ಲಿ ಕಳೆದ ಕೆಲ ದಿನಗಳಿಂದ ಮಂಜು ಹರಡಿದೆ. ವಿಮಾನಯಾನಿಗಳಲ್ಲಿ ತೀವ್ರ ಅನಿಶ್ಚಿತತೆ ಉಂಟಾಗಿದೆ.

ರಾತ್ರಿ ವೇಳೆ ವಿಮಾನದ ಹಾರಾಟ ತಡವಾದ ಸಂದರ್ಭದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಕಲ್ಪಿಸುವ ಬಗ್ಗೆಯೂ ಸ್ಪಷ್ಟತೆ ಇರುವುದಿಲ್ಲ ಎಂದು ಪ್ರಯಾಣಿಕರಾದ ಅಶಿಕಾ ವರ್ಮ ತಿಳಿಸಿದ್ದಾರೆ.

ವಿಮಾನ ನಿಲ್ದಾಣಗಳಲ್ಲಿ ಉದ್ದನೆಯ ಸರದಿ, ಕೆಲವರು ನೆಲದ ಮೇಲೆ ಕುಳಿತು ಇಲ್ಲವೇ ಮಲಗಿದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಡಿವೆ.

ತಮ್ಮ ವಿಮಾನ ಹತ್ತು ಗಂಟೆ ತಡವಾಗಿತ್ತು. ಹವಾಮಾನ ಪರಿಸ್ಥಿತಿ ಉತ್ತಮವಾಗಿಲ್ಲ ಎಂದು ವಿಮಾನದ ಸಿಬ್ಬಂದಿ ನನಗೆ ಸುಳ್ಳು ಹೇಳಿದ್ದರು ಎಂದು ಹಿಂದಿ ಚಿತ್ರ ನಟ ರಣವೀರ್ ಶೊರೆ ಹೇಳಿದ್ದಾರೆ.

ಹತ್ತು ಗಂಟೆ ವಿಳಂಬದ ನಂತರ ಮಧ್ಯರಾತ್ರಿ (4ನೇ ಪುಟಕ್ಕೆ)

### ನೆರವಿಗೆ ಕ್ರಮ ಎಂದ ಸಚಿವ ಸಿಂಧಿಯಾ

ನವದೆಹಲಿ ಜ. 16 - ಮಂಜಿನ ಕಾರಣದಿಂದ ವಿಮಾನಯಾನಕ್ಕೆ ಅಡ್ಡಿಯಾಗುತ್ತಿರುವುದರಿಂದ ಜನರಿಗೆ ಆಗುವ ಸಮಸ್ಯೆಗಳನ್ನು ಎದುರಿಸಲು ಮೆಟ್ರೋ ವಿಮಾನ ನಿಲ್ದಾಣಗಳಲ್ಲಿ ವಾರ್ ರೂಂಗಳನ್ನು ತೆರೆಯಲಾಗುವುದು ಎಂದು ಕೇಂದ್ರ ನಾಗರಿಕ ವಿಮಾನಯಾನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ವಿಮಾನ ನಿಲ್ದಾಣಗಳಿಗೆ ಅಗತ್ಯ ಪ್ರಮಾಣದ ಸಿ.ಐ.ಎಸ್.ಎಫ್. ಸಿಬ್ಬಂದಿ ಯನ್ನೂ ಒದಗಿಸಲಾಗುವುದು ಎಂದವರು ಹೇಳಿದ್ದಾರೆ.

ಕಳೆದ ಕೆಲ ದಿನಗಳಲ್ಲಿ ಮಂಜಿನ ಕಾರಣದಿಂದ ವಿಮಾನಯಾನಕ್ಕೆ ಅಡ್ಡಿಯಾಗುತ್ತಿದೆ. ಇಂಡಿಗೋ ಪೈಲಟ್ ಮೇಲೆ ಪ್ರಯಾಣಿಕರೊಬ್ಬರು ಹಲ್ಲೆ ನಡೆಸಿದ ಘಟನೆಯೂ ನಡೆದಿತ್ತು.

ಈ ಹಿನ್ನೆಲೆಯಲ್ಲಿ ಮಂಜಿನ ಪರಿಸ್ಥಿತಿ ಎದುರಿಸಲು ಮಾರ್ಗಸೂಚಿಯೊಂದನ್ನು ರೂಪಿಸಲಾಗಿದೆ. (2ನೇ ಪುಟಕ್ಕೆ)

## ವರ್ಗಾವಣೆಗೆ ಹಾತೊರೆಯದಿರಿ

### ಪೊಲೀಸ್ ಅಧಿಕಾರಿಗಳಿಗೆ ಸಿದ್ಧರಾಮಯ್ಯ ಕಿವಿಮಾತು

ಬೆಂಗಳೂರು, ಜ. 16 - ವರ್ಗಾವಣೆಗಳಿಗೆ ಪೊಲೀಸ್ ಅಧಿಕಾರಿಗಳು ಹಾತೊರೆಯುವುದು, ಜಾತಿ ಬಳಸುವುದು ಅತ್ಯಂತ ಕೆಟ್ಟದ್ದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಇಂತಹ ಕೃತ್ಯಗಳಿಂದ ಜನರ ಸೇವೆ ಮಾಡಲು ಸಾಧ್ಯವೇ? ಎಂದಿರುವ ಮುಖ್ಯಮಂತ್ರಿ, ಮುಂದಾದರೂ ಇದನ್ನು ನಿಲ್ಲಿಸಿ ಎಂದು ಕಿವಿಮಾತು ಹೇಳಿದ್ದಾರೆ.

ಹಿರಿಯ ಅಧಿಕಾರಿಗಳ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ನಿಮ್ಮ ಸಂಕಷ್ಟಗಳಿಗೆ ನಾವಿದ್ದೇವೆ. ಅದರಂತೆ ನೀವು ಜನರ ಸೇವೆ ಮಾಡಿ ಎಂದರು.

ಕರ್ನಾಟಕ ನಾಮಕರಣಗೊಂಡು, ಏಕೀಕರಣದ 50 ವರ್ಷದ ನೆನಪಿಗಾಗಿ ಎಲ್ಲಾ ಪೊಲೀಸ್ ಸಿಬ್ಬಂದಿಗೆ ಬೆಳ್ಳಿಯ ಪದಕ ನೀಡುವುದಾಗಿ ಘೋಷಣೆ ಮಾಡಿದ ಮುಖ್ಯಮಂತ್ರಿ ಅವರು, ವೈದ್ಯಕೀಯ ವೆಚ್ಚವನ್ನು ಒಂದು ಸಾವಿರದಿಂದ 1,500ಕ್ಕೆ ಹೆಚ್ಚಳ ಮಾಡುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಭವ್ಯವಾದ ಸುಸಜ್ಜಿತ ಸುವರ್ಣ



ಪೊಲೀಸ್ ಭವನ ನಿರ್ಮಾಣ ಮಾಡಲು ಬಜೆಟ್‌ನಲ್ಲಿ ಹಣ ನಿಗದಿಪಡಿಸುವುದಾಗಿ ತಿಳಿಸಿದರು.

ರಾಜ್ಯವನ್ನು ಡ್ರಗ್ಸ್ ಮುಕ್ತಗೊಳಿಸುವಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳುವಲ್ಲಿ ಸಿಇಎನ್ ಠಾಣಾಧಿಕಾರಿಗಳ ಹುದ್ದೆಯನ್ನು ಎಸಿಪಿ ಮತ್ತು ಡಿಸಿಪಿ ಮಟ್ಟಕ್ಕೆ ಉನ್ನತೀಕರಣ ಮಾಡಲಾಗುವುದು. ಬೆಂಗಳೂರು ನಗರ ಒಂದರಲ್ಲೇ 8 ಅಡಿಷನಲ್ ಡಿಸಿಪಿ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಷ್ಟಿಸಲಾಗುವುದು ಎಂದರು.

ಕಳ್ಳತನ ಹೆಚ್ಚುತ್ತಿದೆ ಎಂದರೆ ಗಸ್ತು ವ್ಯವಸ್ಥೆ, ಹೊಯ್ಸಳ ಸಿಬ್ಬಂದಿ ಮತ್ತು ಠಾಣಾಧಿಕಾರಿಗಳು ಕರ್ತವ್ಯದಲ್ಲಿ ವಿಫಲರಾಗಿದ್ದಾರೆ ಎಂದರ್ಥ. ಇದೇ ಸ್ಥಿತಿ ಮುಂದುವರೆದರೆ ಎಸ್‌ಪಿ ಮತ್ತು ಡಿಸಿಪಿಗಳನ್ನು ಹೊಣೆ ಮಾಡುವುದಾಗಿ ಎಚ್ಚರಿಸಿದರು.

ನೀವು ನೀಡಿರುವ ಅಂಕಿ-ಅಂಶಗಳು ತೃಪ್ತಿಕರವಾಗಿಲ್ಲ, ಮುಂದಿನ ವರ್ಷದ ವೇಳೆಗೆ ಕಾರ್ಯಕ್ಷಮತೆ ಉತ್ತಮವಾಗುವಂತೆ ನೋಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣದಲ್ಲಿ ರಾಜ್ಯದ ಸಾಧನೆ ತೃಪ್ತಿಕರವಾಗಿಲ್ಲ. ಶೋಷಣೆಗೆ ಒಳಗಾದವರಿಗೆ ವ್ಯವಸ್ಥೆ ಮೇಲೆ ನಂಬಿಕೆ ಬರಬೇಕಾದರೆ ದೌರ್ಜನ್ಯ ಪ್ರಕರಣಗಳ ತನಿಖೆಯ ಗುಣಮಟ್ಟ ಹೆಚ್ಚಾಗಬೇಕು ಎಂದು ಸಿದ್ದರಾಮಯ್ಯ ಹೇಳಿದರು. ನಿಮಗೆ ಸರ್ಕಾರ ಮುಕ್ತ ಅಧಿಕಾರ ಕೊಟ್ಟಿದೆ, ನಿಮ್ಮ ಕೆಲಸದಲ್ಲಿ ಮೂಗು ತೂರಿಸ ಬಾರದು ಎಂಬುದು ನನ್ನ ಬದ್ಧತೆ, ಆದರೆ ಅದನ್ನೇ ದುರುಪಯೋಗ ಮಾಡಿಕೊಳ್ಳಬೇಡಿ, ಜನರಿಗೆ ಅನುಕೂಲ ಮಾಡಿಕೊಡಲು ನಿಮ್ಮ ಮುಕ್ತ ಅಧಿಕಾರವನ್ನು ಬಳಕೆ ಮಾಡಿಕೊಳ್ಳಿ ಎಂದರು.

## ಸಮಸ್ಯೆ ಆಲಿಸಲು ಜನರ ಮನೆ ಬಾಗಿಲಿಗೆ ಸೈಕಲ್‌ನಲ್ಲಿ ಹೋದ ಡಿಸಿ

ಕೊಟ್ಟೂರು, ಜ. 16 - ತಾಲ್ಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ಜನರಿಂದ ಕುಂದು ಕೊರತೆಗಳ ಅರ್ಜಿ ಸ್ವೀಕರಿಸಲೆಂದು ಇಂದು ಬೆಳಿಗ್ಗೆ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಪಟ್ಟಣಕ್ಕೆ ಆಗಮಿಸಿ, ಇಲ್ಲಿನ ಗಾಂಧಿ ವೃತ್ತದಿಂದ ಸೈಕಲ್ ಸಂಚಾರ ಕೈಗೊಂಡು ಪಟ್ಟಣದೆಲ್ಲೆಡೆ ವೀಕ್ಷಣೆ ನಡೆಸಿದ್ದು ನಾಗರಿಕರ ಮೆಚ್ಚುಗೆಗೆ ಪಾತ್ರವಾಯಿತು.

ಗಾಂಧಿ ವೃತ್ತದಿಂದ ತಾಲ್ಲೂಕು ಆಡಳಿತದ ಅಧಿಕಾರಿಗಳೊಂದಿಗೆ ಸೈಕಲ್ ಸಂಚಾರ ಕೈಗೊಂಡ ಜಿಲ್ಲಾಧಿಕಾರಿಗಳ ಯಾತ್ರೆ ಕೊಟ್ಟೂರೇಶ್ವರ ದೇವಸ್ಥಾನದ ರಸ್ತೆ ಗಚ್ಚಿನ ಮಠ, ಊರಮ್ಮ ಗುಡಿ ಪ್ರದೇಶ, ತೇರು ಬಯಲು, ಬಳ್ಳಾರಿ ಕ್ಯಾಂಪ್, ಬಸ್‌ನಿಲ್ದಾಣ, ಬಾಲಾಜಿ ಕಲ್ಯಾಣ ಮಂಟಪ ರಸ್ತೆ ಮೂಲಕ ಸಾಗಿ ಸಮುದಾಯ ಆರೋಗ್ಯ ಕೇಂದ್ರ, ಎಪಿಎಂಸಿ ಪ್ರದೇಶಗಳನ್ನು ಸಂಚರಿಸಿದರು.

ಜಿಲ್ಲಾಧಿಕಾರಿಗಳು ತಮ್ಮ ಮನೆ ಬಾಗಿಲ ಬಳಿ ಸೈಕಲ್ ಮೂಲಕ ಬರುತ್ತಿದ್ದಂತೆ ಮನೆಯ ಹೆಣ್ಣುಮಕ್ಕಳು ಮತ್ತು ಇತರರು ಕುಡಿಯುವ ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ ಎಂದು ದೂರಿದರಲ್ಲದೇ, ಮನೆಗಳ



ಮುಂದೆ ಇರುವ ಚರಂಡಿ ನೀರು ಹರಿಯದಂತೆ ಕಸ ಕಡ್ಡಿಗಳಿಂದ ತುಂಬಿಹೋಗಿವೆ, ಇದರ ಪರಿಣಾಮ ಸೊಳ್ಳೆಗಳ ಆರ್ಭಟದಿಂದ ನಿದ್ದೆಯಿಲ್ಲದೆ ರಾತ್ರಿ ಇಡೀ ಜಾಗರಣೆ ಮಾಡುವಂತಾಗಿದೆ ಎಂದು ಅಲವತ್ತು ಕೊಂಡರು.

ಸ್ಥಳದಲ್ಲಿಯೇ ಇದ್ದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಸರುಲ್ಲಾ ಅವರಿಗೆ ಕೂಡಲೇ ಚರಂಡಿಗಳನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು. ನೀರನ್ನು ಸಮರ್ಪಕವಾಗಿ ಪೂರೈಸಲು ಮುಂದಾಗಿ

**ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ನಡೆಗೆ ನಾಗರಿಕರ ಮೆಚ್ಚುಗೆ**

ಎಂದು ತಾಕೀತು ಮಾಡಿದರು. ಬಸ್ ನಿಲ್ದಾಣದ ಶೌಚಾಲಯವನ್ನು ವೀಕ್ಷಿಸಿದ ಜಿಲ್ಲಾಧಿಕಾರಿಗಳು ಬಸ್ ನಿಲ್ದಾಣದಲ್ಲಿಯೇ ಇದ್ದ ಕಸದ ರಾಶಿಯನ್ನು ತೆಗೆಯದೇ ಅಸ್ವಚ್ಛತೆ ವಾತಾವರಣ ನಿರ್ಮಾಣವಾಗಿರುವುದಕ್ಕೆ ಸಂಬಂಧಪಟ್ಟವರನ್ನು ತರಾಟೆಗೆ ತೆಗೆದುಕೊಂಡರು.

ಬೀದಿ ಬದಿಯ ಹೋಟೆಲ್‌ಗಳತ್ತ ಜಿಲ್ಲಾಧಿಕಾರಿಗಳು ಸಾಗಿ ಮಿರ್ಚಿಯನ್ನು ಸವಿದು ರುಚಿ ಅನುಭವಿಸಿದರಲ್ಲದೆ, ಸರಿಯಾಗಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಎಂದು ಎಚ್ಚರಿಸಿದರು. ಬಸ್ ನಿಲ್ದಾಣ ಸಮುದಾಯ ಆರೋಗ್ಯ ಕೇಂದ್ರ ಎಪಿಎಂಸಿಗಳಲ್ಲಿ ಉತ್ತಮ (2ನೇ ಪುಟಕ್ಕೆ)

## ಮಂದಿರ ಪ್ರಾಣ ಪ್ರತಿಷ್ಠಾಪನೆ ರಾಜಕೀಯಗೊಳಿಸಲಾಗಿದೆ



ಚೀಫೋಬೋಜೌ (ನಾಗಾಲ್ಯಾಂಡ್), ಜ. 16 - ಅಯೋಧ್ಯೆಯಲ್ಲಿ ನಡೆಯಲಿರುವ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ಸಮಾರಂಭವನ್ನು ರಾಜಕೀಯಗೊಳಿಸಲಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಾಣ ಪ್ರತಿಷ್ಠಾಪನೆಯನ್ನು ಪ್ರಧಾನ (2ನೇ ಪುಟಕ್ಕೆ)

## ಸೈಬರ್ ಅಪರಾಧ ಶಂಕೆ: 8 ಸಾವಿರಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳಿಗೆ ತಡೆ

ರಾಂಚಿ, ಜ. 16 - ಸೈಬರ್ ಅಪರಾಧಿಗಳಿಗೆ ಸಂಬಂಧಿಸಿದ ಶಂಕೆಯ ಮೇಲೆ 8,674 ಬ್ಯಾಂಕ್ ಖಾತೆಗಳನ್ನು ತಡೆಯಲಾಗಿದೆ. ಜಾರ್ಖಂಡ್‌ನ ದಿಯೋಘರ್ ಜಿಲ್ಲೆಯಲ್ಲಿ ಅತಿ ಹೆಚ್ಚಿನ 2002 ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಈ ಖಾತೆಗಳು ನಕಲಿ ಆಗಿದ್ದರೆ ಇಲ್ಲವೇ ಅಕ್ರಮ ನಡೆಸಿದವರ ಜೊತೆ ಸಂಪರ್ಕ ಹೊಂದಿದ್ದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

## ಭದ್ರಾ ಬಲ ನಾಲೆಗೆ ನೀರು ಬಿಡುಗಡೆ

ಶಿವಮೊಗ್ಗ, ಜ. 16- ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ ಸೋಮವಾರ ತಡ ರಾತ್ರಿಯಿಂದ ನೀರು ಬಿಡುಗಡೆ ಮಾಡಲಾಗಿದೆ.

ಮಂಗಳವಾರ ಬೆಳಗ್ಗೆ ಮಾಹಿತಿ ಪ್ರಕಾರ 700 ಕ್ಯೂಸೆಕ್ಸ್ ನೀರು ಹರಿಸಲಾಗುತ್ತಿದ್ದು, ಬುಧವಾರ ಬೆಳಗ್ಗೆ ವೇಳೆಗೆ 1500 ಕ್ಯೂಸೆಕ್ಸ್ ಗೆ ಏರಿಕೆ ಆಗಲಿದೆ. ಜ. 6 ರಂದು ನಡೆದ ಭದ್ರಾ ಕಾಡಾ ಸಭೆಯಲ್ಲಿ ಜ. 20 ರಿಂದ ಆಫ್ ಅಂಡ್ ಆನ್ ಪದ್ಧತಿಯಲ್ಲಿ ನೀರು ಹರಿಸಲು ತೀರ್ಮಾನಿಸಲಾಗಿತ್ತು.

ನಂತರ ವೇಳಾಪಟ್ಟಿಯನ್ನು ಬದಲಾವಣೆ ಮಾಡಿದ್ದು, ಜ. 15 ರಿಂದ 12 ದಿನ ನಾಲೆಯಲ್ಲಿ ನೀರು ಹರಿಸಲು ಸೂಚನೆ ನೀಡಲಾಗಿತ್ತು. ಆ ಪ್ರಕಾರ ಸೋಮವಾರ ರಾತ್ರಿಯಿಂದ ಬಲದಂಡೆ ನಾಲೆಗೆ ನೀರು ಬಿಡಲಾಗಿದೆ.

## ಅಗ್ರಹಾರಗಳು ಬದಲಾದರೂ ಹಟ್ಟಿ, ಹಾಡಿಗಳು ಬದಲಾಗುತ್ತಿಲ್ಲ



ದಾವಣಗೆರೆ, ಜ. 16- ಕಾಲ ಬದಲಾದಂತೆ ಅಗ್ರಹಾರಗಳು ಬದಲಾದರೂ ಹಟ್ಟಿಗಳು, ಹಾಡಿಗಳು ಬದಲಾಗುತ್ತಿಲ್ಲ. ಸಂಸ್ಕೃತಿ, ದೇವರು, ಧರ್ಮ, ಆಚಾರ, ವಿಚಾರಗಳೇ ಮೇಲು ಎನ್ನುವ ಕಿತ್ತಾಟದಲ್ಲಿಯೇ ನಾವುಗಳು ತೊಡಗಿದ್ದೇವೆ. ನಮ್ಮನ್ನು ಒಂದಾಗದಂತೆ ಮೇಲ್ವರ್ಗಗಳು ನೋಡಿಕೊಳ್ಳುತ್ತಿವೆ ಎಂದು ನಿವೃತ್ತ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ಹೇಳಿದರು.

ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಚಿತ್ರದುರ್ಗದಲ್ಲಿ ಇದೇ ದಿನಾಂಕ 28 ರಂದು ನಡೆಯಲಿರುವ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಬೃಹತ್ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶೋಷಿತ ವರ್ಗದ ಏಳಿಗೆಗಾಗಿ ರಚಿಸಲಾಗಿರುವ

**ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಬೃಹತ್ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ನಿವೃತ್ತ ಪ್ರಾಧ್ಯಾಪಕ ಡಾ. ಎ.ಬಿ. ರಾಮಚಂದ್ರಪ್ಪ ವ್ಯಾಕುಲತೆ**

ಸಂವಿಧಾನದ ಫಲವನ್ನು ಅನುಭವಿಸುತ್ತಿರುವವರು ಮೇಲ್ಜಾತಿಯವರೇ ಹೊರತು ಶೋಷಿತ ಸಮುದಾಯಗಳಲ್ಲ ಎಂದರು.

ನಾವುಗಳು ಕೇವಲ ಸವಲತ್ತುಗಳನ್ನು ಪಡೆದು ಫಲವನ್ನು ಅನುಭವಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿ ನಾವಿದ್ದೇವೆ. ಇನ್ನಾದರೂ ಈ ಬಗ್ಗೆ ಎಚ್ಚರಗೊಳ್ಳಬೇಕಾದ ಅಗತ್ಯತೆ ಇದ್ದು, ತನ್ಮೂಲಕ ಸಿಗಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳಬೇಕಾಗಿದೆ ಎಂದು (4ನೇ ಪುಟಕ್ಕೆ)

## ಮಂದಿರಕ್ಕೆ 108 ಅಡಿ ಉದ್ದದ ಅಗರಬತ್ತಿಗೆ ಚಾಲನೆ

ಅಯೋಧ್ಯೆ, ಜ. 16 - ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಮಹಾಂತ ನೃತ್ಯ ಗೋಪಾಲದಾಸ್ ಅವರು ರಾಮ ಮಂದಿರಕ್ಕೆ ಅರ್ಪಿಸಲಾದ 108 ಅಡಿ ಉದ್ದದ ಅಗರಬತ್ತಿಯನ್ನು ಬೆಳಗಿದ್ದಾರೆ.


ಜೈ ಶ್ರೀರಾಮ್ ಘೋಷಣೆಗಳ ನಡುವೆ ಗುಜರಾತ್‌ನಿಂದ ತರಲಾಗಿದ್ದ ಅಗರಬತ್ತಿ ಯನ್ನು ದಾಸ್ ಬೆಳಗಿದ್ದಾರೆ. ಅದರ ಪರಿಮಳ ಹಲವು ಕಿಲೋಮೀಟರ್‌ಗಳವರೆಗೆ (2ನೇ ಪುಟಕ್ಕೆ)

ಪುಣ್ಯಸ್ಮರಣೆ



35ನೇ ಪುಣ್ಯಸ್ಮರಣೆ
ದಿ|| ಆರ್. ಶಂಕರ್
ಫೋರ್‌ಮನ್, ಮುನ್ಸಿಪಾಲಿಟಿ,
ದಾವಣಗೆರೆ. ನಿಧನ: 14.01.1989

ನೀವು ನಮ್ಮನ್ನಗಲಿ
ಹಲವು ವರ್ಷಗಳಾದರೂ
ನಿಮ್ಮ ಸವಿನೆನಪು
ನಮ್ಮ ಹೃದಯದಲ್ಲಿ
ಹಚ್ಚ ಹಸಿರಾಗಿದೆ.
ಸದಾ ನಿಮ್ಮ ಸ್ಮರಣೆಯಲ್ಲಿ,
ನೀವು ಹಾಕಿ ಕೊಟ್ಟ
ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿದ್ದೇವೆ.



9ನೇ ಪುಣ್ಯಸ್ಮರಣೆ
ದಿ|| ಆರ್. ಗಣೇಶ್
ಸಹಾಯಕ ಕಾರ್ಯಪಾಲಕ ಅಭಿಯಂತರರು
ನಿಧನ: 17.01.2015

ಶ್ರೀಮತಿ ನಾಗಮಣಿ ಗಣೇಶ್, ಪೂಜಾ ಪ್ರಕಾಶ್ B.E, MBA, ಪ್ರಕಾಶ್ B.E, MS., USA.
ಪುನೀತ್ ಶಂಕರ್ B.E., PWD, ದಿ. ಹೇಮಂತ್ B.E., ಚಿ. ಕರ್ಣಆದಿತ್ಯ
ನಿರ್ದೇಶಕರು ಕ.ರಾ.ಸ.ನೌ.ಸಂಘ, ಹಾಗೂ ಬಂಧು-ಮಿತ್ರರು.



ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಜಿಲ್ಲಾ ಬಿಜೆಪಿ
ನೂತನ ಜಿಲ್ಲಾಧ್ಯಕ್ಷರಾಗಿ
ಆಯ್ಕೆಯಾಗಿರುವ
ನಮ್ಮ ಆತ್ಮೀಯ ಗೆಳೆಯರಾದ
ಶ್ರೀ ಎನ್. ರಾಜಶೇಖರ್
ಅವರಿಗೆ ಹೃದಯಪೂರ್ವಕ
ಅಭಿನಂದನೆಗಳು.





ಶ್ರೀ ಕೆ.ಎಸ್. ಶಿವಕುಮಾರ್ ಕಬ್ಬೂರ್
ಎಸ್.ಬಿ. ಹೆಲ್ತ್‌ಕೇರ್ ಮತ್ತು
ಸಿಬ್ಬಂದಿ ವರ್ಗ, ದಾವಣಗೆರೆ.

# ನಿರ್ಲಕ್ಷ್ಯಕ್ಕೊಳಗಾದ ಕನ್ನಡದ ಕಟ್ಟಾಳು ಪಾಟೀಲ್ ಪುಟ್ಟಪ್ಪ ಸಮಾಧಿ



ರಾಣೇಬೆನ್ನೂರು, ಜ.16- ಕನ್ನಡನಾಡು ಕಂಡ ಅಪ್ರತಿಮ ಕನ್ನಡ ಹೋರಾಟಗಾರ - ಬರಹಗಾರ ಪಾಟೀಲ ಪುಟ್ಟಪ್ಪನವರ ಸಮಾಧಿಯು ಇದುವರೆಗೂ ಅಭಿವೃದ್ಧಿಯನ್ನು ಕಾಣದಿರುವುದು ವಿಷಾದದ ಸಂಗತಿ ಎಂದು ಹರಿಹರ ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್ ಪಟೇಲ್, ನೊಳಂಬ ಸಮಾಜದ ಮುಖಂಡ ಮಲೇಬೆನ್ನೂರಿನ ಬಿ ವೀರಯ್ಯ, ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಚನ್ನಗಿರಿ ಕಸಾಪ ಅಧ್ಯಕ್ಷ ಎಲ್.ಜಿ.ಮಧುಕುಮಾರ್ ಬೇಸರ ವ್ಯಕ್ತಪಡಿಸಿದರು.

ಇಲ್ಲಿಗೆ ಸಮೀಪದ ಹಲಗೇರಿ ಗ್ರಾಮದಲ್ಲಿರುವ ಪಾಟೀಲ್ ಪುಟ್ಟಪ್ಪನವರ ಸಮಾಧಿ ಸ್ಥಳಕ್ಕೆ ಅವರ ಜನುಮ ದಿನದ ಪ್ರಯುಕ್ತ ಇಂದು ಬೆಳಿಗ್ಗೆ ಭೇಟಿ ನೀಡಿ, ನಮನ ಸಲ್ಲಿಸಿ ಅವರುಗಳು ಮಾತನಾಡಿದರು.

ಕರ್ನಾಟಕ ಏಕೀಕರಣ ಹಾಗೂ ಗೋಕಾಕ್ ಚಳವಳಿಯ ಪ್ರಮುಖರಾಗಿ, ಕನ್ನಡ ನೆಲ, ಜಲ, ಭಾಷೆಯ ವಿಚಾರವಾಗಿ ತಮ್ಮ ಜೀವಿತದ ಕೊನೆಯವರೆಗೂ ಕನ್ನಡವನ್ನೇ ಜಪಿಸಿ, ನೆಲ-ಜಲ-ಭಾಷೆಗೆ ಧಕ್ಕೆ ಬಂದಾಗಲೆಲ್ಲಾ ತಮ್ಮ ಪ್ರಖರವಾದ, ನೇರವಾದ ನಡೆ-ನುಡಿಗಳಿಂದ ಕನ್ನಡದ ಸಾರಸ್ವತ ಲೋಕವನ್ನು ಹಲವು ಹೋರಾಟಗಳಿಗೆ ಪ್ರೇರೇಪಣೆಗೊಳಿಸಿದ ಕೀರ್ತಿ ಪಾಪುರವರಿಗೆ ಸಲ್ಲುತ್ತದೆ ಎಂದರು.

ನೈರುತ್ಯ ರೈಲ್ವೆ ರಚನೆಯಾಗಲು, ಕನ್ನಡಿಗರಿಗೆ ಮೀಸಲಾತಿಯನ್ನು ನೀಡುವ ವಿಚಾರವಾಗಿ, ಉತ್ತರ ಕರ್ನಾಟಕದ ಅಭಿವೃದ್ಧಿಯ ಹೋರಾಟಗಳಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದ ಪಾಪುರವರು, ಕನ್ನಡದ ಕಟ್ಟಾಳಾಗಿ ತಮ್ಮ ಜೀವವನ್ನೇ ಸವೆಸಿದ್ದರು. ಇವರ ಸಮಾಧಿಯು ಇಂದಿಗೂ ದಿವ್ಯ ನಿರ್ಲಕ್ಷಕ್ಕೆ ಒಳಗಾಗಿರುವುದು ಖಂಡನೀಯ ಎಂದರು.

ಸರ್ಕಾರ ಈಗಲಾದರೂ ಕನ್ನಡದ ಕಟ್ಟಾಳು ಪಾಪು ಸಮಾಧಿಯನ್ನು ಸ್ಮಾರಕದ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕು ಎಂದು ಅವರುಗಳು ಮನವಿ ಮಾಡಿದರು.

ಹರಿಹರ ತಾಲ್ಲೂಕು ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸುದೇವಮೂರ್ತಿ, ಪುರಸಭೆ ಸದಸ್ಯ ಭೋವಿ ಕುಮಾರ್ ಮತ್ತಿತರರು ಈ ವೇಳೆ ಹಾಜರಿದ್ದರು.

# ದೇವರಬೆಳಕೆರೆಯಲ್ಲಿ ಭಾರತ ಸೇವಾದಳ ಶತಮಾನೋತ್ಸವ



ಹರಿಹರ, ಜ.16- ದೇವರಬೆಳಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಭಾರತ ಸೇವಾ ದಳದ ಶತಮಾನೋತ್ಸವ ಪ್ರಯುಕ್ತ ಕಾರ್ಯಕ್ರಮ ನಡೆಯಿತು. ಇದೇ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನವನ್ನೂ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಭಾರತ ಸೇವಾದಳ ಜಿಲ್ಲಾ ಘಟಕದ ಅಧ್ಯಕ್ಷ ಪ್ರೊ. ಚನ್ನಪ್ಪ ಅವರು, ವಿವೇಕಾನಂದರ ಜನ್ಮದಿನದ ಸಂದರ್ಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿರುವುದು ಸಂತಸದ ಸಂಗತಿ. ವೀರ ಸನ್ಯಾಸಿಯಾದ ಅವರು 'ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂಬ ಮಾತನ್ನು ಮಕ್ಕಳಿಗೆ ಅರ್ಥಪೂರ್ಣವಾಗಿ ವಿವರಿಸಿ, ವಿದ್ಯಾರ್ಥಿಗಳು ಭವಿಷ್ಯತ್ತಿನ ಭಾರತದ ಸತ್ಪ್ರಜೆಗಳಾಗಲು ಕರೆ ನೀಡಿದರು.

ಶಿಕ್ಷಕರಾದ ಕು. ಆಯಿಷಾ ಸಿದ್ದಿಕಾ ಮಾತನಾಡಿ, ವಿವೇಕಾನಂದರ ಹಾಗೂ ಸೇವಾದಳ ನಡೆದು ಬಂದ ದಾರಿಯನ್ನು ಮನಮುಟ್ಟುವಂತೆ ವಿವರಿಸಿದರು. ಕಾರ್ಯದರ್ಶಿ ಆರ್.ಆರ್.ಮಠ ಮಾತನಾಡಿ, ತಾಲ್ಲೂಕು ಹಂತದ ಮಕ್ಕಳ ಭಾವೈಕ್ಯತಾ ಮೇಳ ಆಯೋಜಿಸುವ ಕುರಿತು ವಿಷಯ ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಲತಾ ಕೊಟ್ರೇಶ್, ಕಾರ್ಯಕರ್ತರಾದ ಕೆ.ಪಿ.ಬಸವರಾಜಪ್ಪ, ಜಿಲ್ಲಾ ಪ್ರತಿನಿಧಿ ಎಸ್.ಸಿದ್ದಲಿಂಗಪ್ಪ, ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಸೀತಮ್ಮ ತಿಪ್ಪೇಶ್, ಕೋಶಾಧ್ಯಕ್ಷ ಡಾ. ಎ.ಕೆ.ಮಂಜಪ್ಪ, ಎಸ್‌ಡಿಎಂಸಿ ಸದಸ್ಯರು, ಗ್ರಾ.ಪಂ. ಉಪಾಧ್ಯಕ್ಷರಾದ ಐ.ಎಸ್. ಮಲ್ಲಿಕಾರ್ಜುನ್, ಪ್ರೌಢಶಾಲಾ ಮುಖ್ಯಸ್ಥ ಕೆ.ಜಿ.ಬಸವನಗೌಡ್ರು, ತಾಲ್ಲೂಕು ಸಮಿತಿ ಕಾರ್ಯದರ್ಶಿ ಆರ್. ಆರ್.ಮಠ, ಸದಸ್ಯರಾದ ಆರ್.ಬಿ. ಮಲ್ಲಿಕಾರ್ಜುನ್ ಹಾಗೂ ಶಾಲಾ ಮುಖ್ಯಸ್ಥ ಎಸ್.ಟಿ.ಕುಮಾರಸ್ವಾಮಿ ಅವರುಗಳು ಭಾಗವಹಿಸಿದ್ದರು. ಜಿಲ್ಲಾ ಪ್ರಶಸ್ತಿ ವಿಜೇತ ಶಿಕ್ಷಕ ಟಿ.ಎಸ್.ಕುಮಾರಸ್ವಾಮಿ ಸ್ವಾಗತಿಸಿದರು. ಕು. ಶಂಕ್ರವ್ವ ಹುಲ್ಮನಿ ಪ್ರಾರ್ಥಿಸಿದರು. ಶಿಕ್ಷಕ ಆರ್.ಬಿ.ಮಲ್ಲಿಕಾರ್ಜುನ್ ನಿರೂಪಿಸಿದರು.

# ಹರಿಹರ : ಮಾಧ್ವ ಮಹಾಮಂಡಲದಿಂದ ಆರಾಧನೆ



ಹರಿಹರ, ಜ.16- ನಗರದ ಅಖಿಲ ಭಾರತ ಮಾಧ್ವ ಮಹಾ ಮಂಡಲ ಉಡುಪಿ ಹರಿಹರ ಶಾಖೆ ಇವರಿಂದ ಪೇಜಾವರ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರ 4ನೇ ವರ್ಷದ ಆರಾಧನ ಪ್ರಯುಕ್ತ ನಗರದಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಗೆ ಶಾಸಕ ಬಿ.ಪಿ. ಹರೀಶ್ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ವೆಂಕಟೇಶಾಚಾರ್, ಆನಂದ್ ಜೋಷಿ, ರಾಮಕೃಷ್ಣ ಪಿ.ರಾಘವೇಂದ್ರ, ಆರ್.ಸಂದೀಪ್ ಭಾದ್ರಿ, ಮಾಲತೇಶ ಕುಲಕರ್ಣಿ ಹಾಗೂ ಸಕಲ ಭಜನ ಮಂಡಳಿಯರಿಂದ ಕಾರ್ಯಕ್ರಮ ನೆರವೇರಿತು.

# ಜನರ ಮನೆ ಬಾಗಿಲಿಗೆ ಸೈಕಲ್‌ನಲ್ಲಿ ಹೋದ ಡಿಸಿ

(1ನೇ ಪುಟದಿಂದ) ಸಾರ್ವಜನಿಕ ಕಾರ್ಯನಿರ್ವಹಣೆ ಯಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಪಟ್ಟಣ ಪಂಚಾಯಿತಿಯಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಮಂಗಳವಾರದಂದು ಆಯೋಜಿಸಲಾಗಿತ್ತು. ಹಗರಿಬೊಮ್ಮನಹಳ್ಳಿ ಶಾಸಕ ಕೆ. ನೇಮರಾಜ ನಾಯ್ಕ ಮತ್ತು ಅಧಿಕಾರಿಗಳೊಂದಿಗೆ ತಾಲ್ಲೂಕಿನ ಸಾರ್ವಜನಿಕರಿಗೆ ಸಂಬಂಧಪಟ್ಟಂತೆ ಅಹವಾಲುಗಳನ್ನು ಆಯಾಯ ಕಚೇರಿ ಅಧಿಕಾರಿಗಳಿಗೆ ತಾಕೀತು ಮಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಡುವಂತೆ ತಿಳಿಸಿದರು.

ಜಿಲ್ಲಾಧಿಕಾರಿಗಳ ಸೈಕಲ್ ಸವಾರಿಯಲ್ಲಿ ತಹಶೀಲ್ದಾರ್ ಅಮರೇಶ್ ಜಿ.ಕೆ., ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ವೈ. ರವಿಕುಮಾರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಎ.ನಸರುಲ್ಲಾ, ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ವೆಂಕಟಸ್ವಾಮಿ, ಸಬ್‌ಇನ್‌ಸ್ಪೆಕ್ಟರ್ ಗೀತಾಂಜಲಿ ಶಿಂಧೆ ಪಾಲ್ಗೊಂಡಿದ್ದರು.

# ಹರಿಹರದಲ್ಲಿ 21ರಂದು ಜಿಲ್ಲಾ ಮಟ್ಟದ ಕವಿಗೋಷ್ಠಿ

ಹರಿಹರ, ಡಿ.16- ನಗರದ ಶ್ರೀ ಕಾಳಿದಾಸ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಚಿಂತನ ಪ್ರತಿಷ್ಠಾನ, ಹರಿಹರ ಕವಿ ಬಳಗ ಮತ್ತು ಶ್ರೀ ಕಾಳಿದಾಸ ವಿದ್ಯಾಸಂಸ್ಥೆಯ ಸಹಯೋಗದಲ್ಲಿ ಇದೇ ದಿನಾಂಕ 21ರ ಭಾನುವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾಮಟ್ಟದ ಕವಿಗೋಷ್ಠಿ ಮತ್ತು ಸಾಹಿತಿ ಹೆಚ್.ಕೆ.ಕೊಟ್ರಪ್ಪನವರ ಅವ್ವ ಹಚ್ಚಿದ ದೀಪ ಕವನ ಸಂಕಲನದ ಕೃತಿ ಅವಲೋಕನ ನಡೆಯಲಿದೆ. ಡಾ.ಡಿ.ಫ್ರಾನ್ಸಿಸ್ ಅವರು ಕವನ ಸಂಕಲನದ ಅವಲೋಕನ ಮಾಡುವರು.

ನಂತರ ಜಿಲ್ಲಾ ಮಟ್ಟದ ಕವಿಗೋಷ್ಠಿ ನಡೆಯಲಿದೆ. ಕವಿಗಳು ಅಭಿವೃದ್ಧಿಯತ್ತ ಭಾರತ ಎಂಬ ವಿಷಯ ಕುರಿತು ಸ್ವರಚಿತ ಕವಿತೆ ವಾಚಿಸಬೇಕು. ಕವಿಗೋಷ್ಠಿಯಲ್ಲಿ ಭಾಗವಹಿಸುವ ಕವಿಗಳು ಸುಬ್ರಹ್ಮಣ್ಯ ನಾಡಿಗೇರ್ ಅಧ್ಯಕ್ಷರು ಚಿಂತನ ಪ್ರತಿಷ್ಠಾನ ಮೊ : 9242046726 ಮತ್ತು ಡಾ.ಡಿ.ಫ್ರಾನ್ಸಿಸ್ ಸಂಚಾಲಕರು, ಹರಿಹರ ಕವಿ ಬಳಗ ಮೊ : 9731395908 ಇವರನ್ನು ಇದೇ ದಿನಾಂಕ 19 ರೊಳಗೆ ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

# ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಮಕರ ಸಂಕ್ರಾಂತಿ ಆಚರಣೆ



ದಾವಣಗೆರೆ, ಜ. 16 - ನಗರದ ಡಿಸಿಎಂ ಟೌನ್‌ಶಿಪ್‌ನಲ್ಲಿರುವ ಲಿಟ್ಲ್ ಚಾಂಪ್ಸ್ ಸ್ಕೂಲ್‌ನಲ್ಲಿ ಮಕ್ಕಳು, ಶಿಕ್ಷಕಿಯರು ಹಾಗೂ ಪೋಷಕರು ಜೊತೆಗೂಡಿ ದವಸ ಧಾನ್ಯ, ಕಬ್ಬಿನ ರಾಶಿಗಳಿಗೆ ಪೂಜೆ ಸಲ್ಲಿಸಿ, ಎಳ್ಳು-ಬೆಲ್ಲವನ್ನು ಪರಸ್ಪರ ಹಂಚಿ-ಸವಿದು, ಪಟ-ಪಟ ಹಾರೋ ಗಾಳಿಪಟ ಎಂಬ ಹಾಡಿಗೆ ನೃತ್ಯ ಮಾಡುತ್ತಾ, ಆಕಾಶದಲ್ಲಿ ವಿವಿಧ ರೀತಿಯ ಬಣ್ಣಗಳ ಗಾಳಿಪಟಗಳನ್ನು ಹಾರಿಸಿ, ಎಲ್ಲರೂ ಕುಣಿದು, ಕುಪ್ಪಳಿಸಿ ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ವಿಜಯಕುಮಾರ್, ಅಧ್ಯಕ್ಷ ಕಿರಣ್‌ಕುಮಾರ್, ನಿರ್ದೇಶಕರಾದ ಶ್ರೀಮತಿ ಸಹನಾ, ಶ್ರೀಮತಿ ಸ್ನೇಹಾ, ಮುಖ್ಯೋಪಾಧ್ಯಾಯರು, ಶಿಕ್ಷಕಿಯರಾದ ನಾಗವೇಣಿ, ವಿಜಯಲಕ್ಷ್ಮಿ, ಆಶಾ ಕಾವ್ಯ, ಶೋಭಾ, ಗಂಗಾ, ಲಾವಣ್ಯ ಹಾಗೂ ಭಾಗ್ಯಲಕ್ಷ್ಮಿ ಉಪಸ್ಥಿತರಿದ್ದರು.

# ಮಂದಿರ ಪ್ರಾಣ ಪ್ರತಿಷ್ಠಾಪನೆ ರಾಜಕೀಯಗೊಳಿಸಲಾಗಿದೆ

(1ನೇ ಪುಟದಿಂದ) ಮಂತ್ರಿ ನರೇಂದ್ರ ಮೋದಿ ಹಾಗೂ ಆರ್. ಎಸ್.ಎಸ್. - ಬಿಜೆಪಿ ಕಾರ್ಯಕ್ರಮವನ್ನಾಗಿ ಮಾಡಲಾಗಿದೆ. ಇದಕ್ಕೆ ಚುನಾವಣಾ ಬಣ್ಣ ಬಳಿಯಲಾಗಿದೆ ಎಂದಿದ್ದಾರೆ.

ಈ ಸಮಾರಂಭದಲ್ಲಿ ಪಾಲ್ಗೊಳ್ಳದೇ ಇರಲು ಕಾಂಗ್ರೆಸ್ ಉನ್ನತ ನಾಯಕರು ತೆಗೆದುಕೊಂಡಿರುವ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ರಾಹುಲ್ ಗಾಂಧಿ, ಜನವರಿ 22ರ ಸಮಾರಂಭ ರಾಜಕೀಯ ಕಾರ್ಯಕ್ರಮ ಎಂದು ಹಿಂದೂ ಧರ್ಮದ ಅತ್ಯುನ್ನತರೇ ಹೇಳಿದ್ದಾರೆ ಎಂದರು.

ರಾಜಕೀಯ ಸಮಾರಂಭಕ್ಕೆ ಹೋಗಲು ನಮಗೆ ಕಷ್ಟವಾಗುತ್ತದೆ. ನಮ್ಮ ಸಹಭಾಗಿಗಳು ಇಲ್ಲವೇ ನಮ್ಮ ಪಕ್ಷದವರು ರಾಮ ಮಂದಿರಕ್ಕೆ ಹೋಗಲು ಬಯಸಿದರೆ ಹೋಗಬಹುದು. ಆದರೆ, ನಾವು ಜನವರಿ 22ರ ಸಮಾರಂಭಕ್ಕೆ ಹೋಗುವುದು ಕಠಿಣವಾಗಿದೆ ಎಂದರು.

ನಾವು ರಾಜಕೀಯ ಕಾರ್ಯಕ್ರಮದ ಭಾಗವಾಗಲು ಬಯಸುವುದಿಲ್ಲ. ಪ್ರಧಾನ ಮಂತ್ರಿ ಹಾಗೂ ಆರ್.ಎಸ್. ಎಸ್. ನಮ್ಮ ಪ್ರಧಾನ ವಿರೋಧಿಗಳು. ಅವರು ಪ್ರಾಣ ಪ್ರತಿಷ್ಠಾಪನಾ ಸಮಾರಂಭವನ್ನು ಚುನಾವಣಾ ಕಾರ್ಯಕ್ರಮವಾಗಿ ಮಾಡಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದರು. ಪ್ರತಿಪಕ್ಷಗಳ ಐ.ಎನ್.ಡಿ.ಐ.ಎ. ಕೂಟ ಬಲಿಷ್ಠವಾಗಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಈ ಒಕ್ಕೂಟ ಬಿಜೆಪಿಯನ್ನು ಸೋಲಿಸಲಿದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

## ಪ್ರಾಣ ಪ್ರತಿಷ್ಠಾಪನೆಯ ದಿನದಂದು ಸರ್ವಪಕ್ಷಗಳ ಸಮಾವೇಶ

ಕೊಲ್ಕೊತಾ, ಜ. 16 – ಪ್ರಾಣ ಪ್ರತಿಷ್ಠಾಪನೆ ಮಾಡುವುದು ನಮ್ಮ ಕೆಲಸವಲ್ಲ. ಅದು ಅರ್ಚಕರ ಕೆಲಸ ಎಂದು ಹೇಳಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಜ.22ರಂದು ಸರ್ವಧರ್ಮ ಸಮಾವೇಶ ನಡೆಸುವುದಾಗಿ ಹೇಳಿದ್ದಾರೆ.

ಅಯೋಧ್ಯೆಯಲ್ಲಿ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ನೆರವೇರುವ ದಿನದಂದು ಸರ್ವಧರ್ಮ ಸಮಾವೇಶ ನಡೆಸಲಾಗುವುದು. ಅದೇ ದಿನದಂದು, ಮಮತಾ ಬ್ಯಾನರ್ಜಿ ಅವರು ಕಾಳಿಘಾಟ್‌ನಲ್ಲಿರುವ ಕಾಳಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ನಂತರ, ದಕ್ಷಿಣ ಕೊಲ್ಕೊತಾದ ಹಜರಾ ಕ್ರಾಸ್‌ನಿಂದ ಮೆರವಣಿಗೆ ಆರಂಭವಾಗಲಿದೆ.

ಈ ಮೆರವಣಿಗೆಯು ಮಸೀದಿ, ಚರ್ಚ್, ಗುರುದ್ವಾರ ಸೇರಿದಂತೆ ಹಲವು ಧಾರ್ಮಿಕ ಸ್ಥಳಗಳ ಮೂಲಕ ಸಾಗಿ ಬರಲಿದೆ. ನಂತರ ಪಾರ್ಕ್ ಸರ್ಕಸ್ ಮೈದಾನದಲ್ಲಿ ಸರ್ವಧರ್ಮಗಳ ಸಾರ್ವಜನಿಕ ಸಭೆ ನಡೆಯಲಿದೆ.

ಇದೇ ರೀತಿಯ ಸಮಾವೇಶಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಡೆಸುವಂತೆ ಮಮತಾ ಬ್ಯಾನರ್ಜಿ ಅವರು ತಮ್ಮ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ಪ್ರಾಣ ಪ್ರತಿಷ್ಠಾಪನೆ ಮಾಡುವುದು ರಾಜಕಾರಣಿಗಳ ಕೆಲಸವಲ್ಲ. ನಮ್ಮ ಕೆಲಸ ಮೂಲಭೂತ ಸೌಲಭ್ಯ ರೂಪಿಸುವುದು ಎಂದು ಬ್ಯಾನರ್ಜಿ ಹೇಳಿದ್ದಾರೆ.

# ಬಡವರಿಗೆ ವಸತಿ ಕಲ್ಪಿಸಲು ಸರ್ಕಾರ ಬದ್ಧ : ಡಿಕೆಶಿ



ಬೆಂಗಳೂರು, ಜ. 16 - ಬಡವರಿಗೆ ವಸತಿ ನೀಡಲು ಸರ್ಕಾರ ಬದ್ಧವಾಗಿದೆ, ವಸತಿ ಕೋರಿ ಬಂದಿರುವ ಅರ್ಜಿಗಳನ್ನು ಲೆಕ್ಕ ಹಾಕಿ ಅರ್ಹರ ಬಗ್ಗೆ ಪರಿಶೀಲನೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಹಿಂದಿನ ಸರ್ಕಾರ ಬಡವರಿಗೆ ಒಂದು ಲಕ್ಷ ಮನೆ ಕಟ್ಟಿಕೊಡುವುದಾಗಿ ಹೇಳಿದ್ದು, ಯಾರಿಗೂ ಮನೆ ಸಿಕ್ಕಿಲ್ಲ. ಈ ಬಗ್ಗೆ ಅನೇಕರು ಮನವಿ ಸಲ್ಲಿಸಿದ್ದು, ಸಂಪುಟ ಸಭೆಯಲ್ಲಿ ಚರ್ಚೆ ಮಾಡಲಾಗಿದ್ದು, ವಸತಿ ಹಂಚಿಕೆ ಮಾಡಲಾಗುವುದು, ಕೆಲವರು ಹಣ ಕಟ್ಟಿದ್ದು, ಮತ್ತೆ ಕೆಲವರು ಹಣ ಕಟ್ಟದೇ ವಿನಾಯಿತಿ ಕೇಳುತ್ತಿದ್ದಾರೆ ತಿಳಿಸಿದ್ದಾರೆ.

ಆಸ್ತಿ ತೆರಿಗೆ ಪಾವತಿ ನೋಟಿಸ್, ದುಬಾರಿ ದಂಡದ ವಿಚಾರವಾಗಿ ಅನೇಕ ದೂರುಗಳು ಬರುತ್ತಿದ್ದು, 30 x 40 ಅಡಿ ಅಳತೆಯ ನಿವೇಶನ, ಶೆಡ್ ಹೊಂದಿರುವವರಿಗೆ ಆಸ್ತಿ ತೆರಿಗೆ ವಿನಾಯಿತಿ ಹಾಗೂ ದಂಡ ಕಡಿಮೆ ಮಾಡುವ ಚಿಂತನೆ ಇದೆ ಎಂದರು.

ಆಸ್ತಿ ತೆರಿಗೆ ವಿಚಾರದಲ್ಲಿ ಸಮಸ್ಯೆ ಆಗಿದೆ ಎಂಬ ಅನೇಕ ದೂರುಗಳು ಬಂದಿವೆ. ಕಾಲಮಿತಿಯೊಳಗೆ ತೆರಿಗೆ ಪಾವತಿಸಿ ಎಂದು ನೋಟಿಸ್ ಬಂದಿರುವುದರ ಬಗ್ಗೆ ಗಾಬರಿಯಾಗಬೇಡಿ. ದಂಡವನ್ನು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮಾಡುತ್ತೇವೆ. ಈ ಕಾರ್ಯಕ್ರಮ ನಡೆದ ಎಲ್ಲಾ ಕ್ಷೇತ್ರಗಳಲ್ಲೂ ಈ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದರು.

2020ರಲ್ಲಿ ಜಾರಿಗೆ ಬಂದ ಆಸ್ತಿ ತೆರಿಗೆ ಕಾಯ್ದೆಯಿಂದಾಗಿ ಜನರಿಗೆ ದುಬಾರಿ ದಂಡ ವಿಧಿಸಲಾಗುತ್ತಿದೆ. ಅದಕ್ಕೆ ತಿದ್ದುಪಡಿ ತರಬೇಕಿದೆ, ಕೆಲವೇ ದಿನಗಳಲ್ಲಿ ತಿದ್ದುಪಡಿ ಬಗ್ಗೆ ಮಾಹಿತಿ ನೀಡಲಾಗುವುದು. ಸರ್ಕಾರವೇ ಸಮೀಕ್ಷೆ ಮಾಡಿಸಿ, ನಿಮ್ಮ ಮನೆ ಬಾಗಿಲಿಗೇ ನಿಮ್ಮ ಸ್ವತ್ತಿನ ದಾಖಲೆಗಳನ್ನು ಉಚಿತವಾಗಿ ತಂದು ಕೊಡಲಾಗುವುದು ಎಂದು ಹೇಳಿದರು.

## 108 ಅಡಿ ಉದ್ದ ಅಗರಬತ್ತಿಗೆ ಚಾಲನೆ

(1ನೇ ಪುಟದಿಂದ) ಹರಡಲಿದೆ ಎಂದು ಭಕ್ತಾದಿಗಳು ತಿಳಿಸಿದ್ದಾರೆ. ಇದರ ಒಟ್ಟು ತೂಕ 3,610 ಕೆ.ಜಿ. ಆಗಿದೆ. ಈ ಅಗರಬತ್ತಿ ಒಂದೂವರೆ ತಿಂಗಳವರೆಗೆ ಉರಿಯುವ ನಿರೀಕ್ಷೆ ಇದೆ.

## ನೆರವಿಗೆ ಕ್ರಮ ಎಂದ ಸಿಂಧಿಯಾ

(1ನೇ ಪುಟದಿಂದ) ದೆಹಲಿ, ಮುಂಬೈ, ಹೈದರಾಬಾದ್, ಬೆಂಗಳೂರು, ಚೆನ್ನೈ ಹಾಗೂ ಕೊಲ್ಕೊತಾ ವಿಮಾನ ನಿಲ್ದಾಣಗಳಲ್ಲಿ ಪ್ರತಿದಿನ ಮಂಜಿನಿಂದ ಸಮಸ್ಯೆಯಾದ ಘಟನೆಗಳು ವರದಿಯಾಗಿದ್ದವು.


|| ಶ್ರೀ ಕಲ್ಲೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ : 30.11.1929 ಮರಣ : 03.01.2024

ದಾವಣಗೆರೆ ಜಿಲ್ಲೆ ಜಗಳೂರು ತಾ|| ಹಾಲೇಕಲ್ಲು ಗ್ರಾಮದ ವಾಸಿ

ಶ್ರೀಮತಿ ನಾಗರತ್ನಮ್ಮ ಶ್ರೀ ಡಿ. ಬಸವನಗೌಡರು ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 03.01.2024ನೇ ಬುಧವಾರ ಮುಂಜಾನೆ 03.45ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಶ್ರೀ ದೊಡ್ಡಲಿಂಗಪ್ಪ ಕಲ್ಲಪ್ಪನವರು**

ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"ಯನ್ನು**

ದಿನಾಂಕ : 18.01.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಹಾಲೇಕಲ್ಲು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ನಾಗರತ್ನಮ್ಮ ಶ್ರೀ ಡಿ. ಬಸವನಗೌಡರು, ನಿವೃತ್ತ ಇಂಜಿನೀಯರ್ ಮತ್ತು ಸಹೋದರರು ಹಾಗೂ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮರಿಮೊಮ್ಮಕ್ಕಳು, ದೊಡ್ಡಲಿಂಗಪ್ಪ ವಂಶಸ್ಥರು, ಹಾಲೇಕಲ್ಲು ಗ್ರಾಮಸ್ಥರು ಮತ್ತು ಬಂಧು-ಮಿತ್ರರು.

ಫೋ. : 94498 23965, 80739 95514, 97415 47779


ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜ.16- ಸಮಾಜ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನಕ್ಕೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ದಾವಣಗೆರೆ ತಾಲ್ಲೂಕಿನ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹೊಸ ಮತ್ತು ನವೀಕರಣ ವಿದ್ಯಾರ್ಥಿಗಳು www.sw.kar.nic.in ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : ಸಹಾಯಕ ನಿರ್ದೇಶಕ (ಗ್ರೇಡ್-1), ಸಮಾಜ ಕಲ್ಯಾಣ ಇಲಾಖೆ ದಾವಣಗೆರೆ (08192-231413).


|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಜನನ : 08.08.1944, ನಿಧನ 09.01.2024

ದಾವಣಗೆರೆ ನಗರ ವಾಸಿ

**ಶ್ರೀಮತಿ ಶಕುಂತಲಮ್ಮ ಕೊಟ್ರಪ್ಪ ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 9.1.2024ನೇ ಮಂಗಳವಾರ ಮಧ್ಯಾಹ್ನ 1ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಐರಣಿ ಶೆಟ್ರು ಕೊಟ್ರಪ್ಪನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆ**ಯನ್ನು

ದಿನಾಂಕ 17.01.2024ನೇ ಬುಧವಾರ ಬೆಳಿಗ್ಗೆ 11 ಕ್ಕೆ ದಾವಣಗೆರೆ ನಗರ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು : ಶ್ರೀಮತಿ ಶಕುಂತಲಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. : ಮೊ : 80888 43552, ಮುರುಘರಾಜೇಂದ್ರ ಮೊ : 97435 53461**

## ಶ್ರೀಮತಿ ಲಲಿತ ನಿಧನ



ದಾವಣಗೆರೆ ಕಿರುವಾಡಿ ಲೇಔಟ್ ತ್ರಿಶೂಲ್ ಕಲಾ ಭವನದ ಎದುರು, ಸೂರ್ಯ ಇಂಡೇನ್ ಗ್ಯಾಸ್ ಹತ್ತಿರದ ವಾಸಿ ಶ್ರೀ ಬಿ.ಹೆಚ್. ಅಶೋಕ್ ಅವರ ಧರ್ಮಪತ್ನಿ

**ಶ್ರೀಮತಿ ಲಲಿತ**

ಅವರು, ದಿನಾಂಕ 16-1-2024ರ ಮಂಗಳವಾರ ಸಂಜೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 51 ವರ್ಷ ವಯಸ್ಸಾಗಿತ್ತು. ಪತಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 17-1-2024ರ ಬುಧವಾರ ಮಧ್ಯಾಹ್ನ 12-30ಕ್ಕೆ ನಗರದ ಆರ್.ಹೆಚ್. ಬೃಂದಾವನದಲ್ಲಿ ನಡೆಯಲಿದೆ.

**ದು:ಖತಪ್ತ ಕುಟುಂಬ ವರ್ಗ :**

**78923 94568, 98448 50222**


# ಜಿಗಳಿ : ಶ್ರೀ ಗುರು ಸಿದ್ಧರಾಮೇಶ್ವರರ ಜಯಂತಿ



ಮಲೇಬೆನ್ನೂರು, ಜ.16- ಜಿಗಳಿ ಗ್ರಾಮದ ಗ್ರಾ.ಪಂ. ಕಚೇರಿ ಮತ್ತು ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಾಶಿವಯೋಗಿ ಶ್ರೀ ಗುರುಸಿದ್ಧರಾಮೇಶ್ವರರ 851ನೇ ಜಯಂತಿಯನ್ನು ಆಚರಿಸಲಾಯಿತು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಶಾಲಾ ಮುಖ್ಯಶಿಕ್ಷಕ ಜಿ.ನಾಗೇಶ್ ಅವರು ಸಿದ್ಧರಾಮೇಶ್ವರರ ಕಾಯಕ ಹಾಗೂ ವಚನಗಳ ಬಗ್ಗೆ ತಿಳಿಸಿದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಉಪಾಧ್ಯಕ್ಷ ವೈ.ಚೇತನ್‌ಕುಮಾರ್, ಗ್ರಾ.ಪಂ. ಸದಸ್ಯರಾದ ಎನ್.ಎಂ.ಪಾಟೀಲ್, ಡಿ.ಎಂ.ಹರೀಶ್, ಜಿ. ಬೇವಿನಹಳ್ಳಿಯ ಹೋಬಳಿ ಗೌಡ್ರ ಆನಂದ್, ದೇವರಾಜ್, ಬಿ.ಕೆ.ರಂಗನಾಥ್, ಪೂಜಾರ್ ನಾಗರಾಜ್, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ. ಎಂ.ದೇವೇಂದ್ರಪ್ಪ, ಎಂ.ವಿ.ನಾಗರಾಜ್, ಪಿಡಿಓ ಉಮೇಶ್, ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್, ಮಾಜಿ ಅಧ್ಯಕ್ಷ ಜಿ.ಪಿ.ಹನುಮಗೌಡ, ಎಸ್‌ಡಿಎಂಸಿ ಸದಸ್ಯರಾದ ವಿಜಯಭಾಸ್ಕರ್, ವಿಜಯಕುಮಾರ್, ಬಿ.ಕೆ.ನಾಗರಾಜ್, ಭರಮಗೌಡ, ಬಾಲಕೇಂದ್ರದ ಅಧ್ಯಕ್ಷ ಜಿ.ಆರ್. ಚಂದ್ರಪ್ಪ, ರೈತ ಸಂಘದ ರುದ್ರಗೌಡ, ಪತ್ರಕರ್ತ ಜಿಗಳಿ ಪ್ರಕಾಶ್, ಗ್ರಾ.ಪಂ.ನ ಬಿ.ಮೌನೇಶ್, ಬಸವರಾಜಯ್ಯ, ಮುತ್ತು, ರಂಗನಾಥ್, ಶಾಲಾ ಶಿಕ್ಷಕರಾದ ಲಿಂಗರಾಜ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ, ಜಯಶ್ರೀ, ಲೋಕೇಶ್ ಮತ್ತಿತರರು ಭಾಗವಹಿಸಿದ್ದರು.

# ಲಾರಿ ಚಾಲಕರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಹಶಿಲ್ದಾರ್ ಬಸವರಾಜಯ್ಯ ನವರಿಗೆ ಮನವಿ



ಹರಿಹರ, ಜ. 16 - ನಗರದಲ್ಲಿ ಲಾರಿ ಚಾಲಕರು ತಮ್ಮ ಹಲವಾರು ಬೇಡಿಕೆಗ ಳನ್ನು ಸರ್ಕಾರ ಆದಷ್ಟು ಬೇಗ ಈಡೇರಿಸುವಂತೆ ಆಗ್ರಹಿಸಿ ತಹಶಿಲ್ದಾರ್ ಬಸವರಾ ಜಯ್ಯ ನವರಿಗೆ ಮನವಿ ಅರ್ಪಿಸಿದರು.

ಈ ವೇಳೆ ಲಾರಿ ಚಾಲಕರ ಸಂಘದ ಅಧ್ಯಕ್ಷ ಯೂಸುಫ್ ಮಾತನಾಡಿ ಲಾರಿ ಚಾಲಕರು ಮಾಲೀಕರಿಗೆ ಭಾರತೀಯ ನ್ಯಾಯ ಸಂಹಿತೆ 2023ರ ಸೆಕ್ಷನ್ 106/1 ಮತ್ತು 106/2 ರಲ್ಲಿ ಈ ಹಿಂದೆ ಇದ್ದಂತ 304 ತೆಗೆದು ಆ ಕಾನೂನು ಜಾರಿಗೆ ಮಾಡಿರುತ್ತಾರೆ. ಮೋಟಾರು ಚಾಲಕರು ಮಾಲೀಕರಿಗೆ ಹೊಸದಾಗಿ ತಂದಿರುವ ಕಾನೂನು ಪ್ರಕಾರ ಅಪಘಾತದಲ್ಲಿ ಮೃತರಾದರೆ ಚಾಲಕ 5 ರಿಂದ 10 ವರ್ಷಗಳ ಸೆರೆವಾಸ ಮತ್ತು 7 ಲಕ್ಷ ದಂಡ ತೆರಬೇಕಾಗುತ್ತದೆ. ಆದರೆ ಹಳೆಯ 304 ಎ ಪ್ರಕಾರ ಮೃತ ಪಟ್ಟರೆ ಎರಡು ವರ್ಷಗಳರೆಗೆ ಮಾತ್ರ ಸೆರೆವಾಸ ಇತ್ತು. ಹಾಗಾಗಿ ಹಳೆಯ ಕಾನೂನು ಜಾರಿಗೆ ತರಬೇಕು. ಲಾರಿ ಮೇಲೆ ದೇಶದ ಶೇ. 70 ರಷ್ಟು ಚಾಲಕರ ಜೀವನ ಅವಲಂಬಿತವಾಗಿದ್ದು, ಈ ಹೊಸ ಕಾನೂನು ಜಾರಿಗೆ ತಂದು ಚಾಲಕರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಒಂದು ವೇಳೆ ಕಾನೂನು ಹಿಂಪಡೆಯದೇ ಹೋದರೆ ದಿ 17 ರಂದು ರಾಜ್ಯ ಫೆಡ ರೇಶನ್ ಆಫ್ ಕರ್ನಾಟಕ ಲಾರಿ ಮಾಲೀ ಕರ ಸಂಘದವರು ಕರೆದಿರುವ ಮುಷ್ಕರಕ್ಕೆ ನಮ್ಮ ತುಂಗಭದ್ರಾ ಲಾರಿ ಚಾಲಕರು ಮತ್ತು ಕ್ಲೀನರ್ ಶ್ರೇಯಾಭಿವೃದ್ಧಿ ಸಂಘ ಕೈ ಜೋಡಿಸಿ ಮುಷ್ಕರಕ್ಕೆ ಬೆಂಬಲವನ್ನು ನೀಡಿ ಲಾರಿಗಳ ಸಂಚಾರವನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಜಂಬಯ್ಯ,ಇಮ್ರಾನ್, ಜಪಾನ್ ರಫೀಕ್ ಸಾಬ್, ಹಿದಾಯತ್, ಸಲ್ಮಾನ್, ವಾಸು, ಪಾಂಡು, ಅಬ್ದುಲ್ ಗಫಾರ್ ಹಾಗೂ ಇತರರು ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಆದ್ಯತೆ : ಮೋದಿ**
ಅಮರಾವತಿ : ಭ್ರಷ್ಟಾಚಾರ ಹಾಗೂ ಭ್ರಷ್ಟರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಕೇಂದ್ರದ ಎನ್.ಡಿ.ಎ. ಸರ್ಕಾರದ ಆದ್ಯತೆಯಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**ಭಾರತ – ಚೀನಾ ನಡುವೆ ಎರಡು ಸಂಘರ್ಷ ಬೆಳಕಿಗೆ**
ನವದೆಹಲಿ : ಭಾರತ ಹಾಗೂ ಚೀನಾ ಪಡೆಗಳ ನಡುವೆ ವಾಸ್ತವಿಕ ನಿಯಂತ್ರಣ ರೇಖೆಯಲ್ಲಿ ಈ ಹಿಂದೆ ನಡೆದಿದ್ದ ಎರಡು ಅಜ್ಞಾತ ಸಂಘರ್ಷ ಘಟನೆಗಳು ಬೆಳಕಿಗೆ ಬಂದಿವೆ. ಈ ಸಂಘರ್ಷಗಳಲ್ಲಿ ಭಾಗಿಯಾಗಿದ್ದ ಭಾರತೀಯ ಸೈನಿಕ ಸಿಬ್ಬಂದಿಗೆ ಶೌರ್ಯ ಪ್ರಶಸ್ತಿ ನೀಡಿದ ನಂತರ ಘಟನೆಗಳು ಬಹಿರಂಗವಾಗಿವೆ.

**ಕೇರಳದಲ್ಲಿ ಪ್ರಧಾನಿ ಮೋದಿ ರೋಡ್ ಶೋ**
ಕೊಚ್ಚಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೇರಳದ ಕೊಚ್ಚಿಯಲ್ಲಿ ಬೃಹತ್ ರೋಡ್ ಶೋ ನಡೆಸಿದ್ದಾರೆ. ಲೋಕಸಭಾ ಚುನಾವಣೆಗೆ ಮುಂಚೆ ಈ ರೋಡ್ ನಡೆಸಿರುವುದು ಪ್ರಾಮುಖ್ಯತೆ ಪಡೆದುಕೊಂಡಿದೆ. ರಾಜ್ಯದಲ್ಲಿ ಇತ್ತೀಚೆಗೆ ಮೋದಿ ರೋಡ್ ಶೋ ನಡೆಸುತ್ತಿರುವುದು ಎರಡನೇ ಬಾರಿ

**2028ರ ವೇಳೆಗ ಭಾರತ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆ**
ದಾವೋಸ್ : ಭಾರತ 2028ರ ವೇಳೆಗೆ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಬಹುದು. ದೇಶದ ಜನಸಂಖ್ಯೆಯ ಹಿತ ಕಾಪಾಡುವ ರೀತಿಯಲ್ಲಿ ಇಂಧನ ವ್ಯವಸ್ಥೆಯಲ್ಲಿ ರೂಪಾಂತರಣ ತರಬೇಕಿದೆ ಎಂದು ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

**ಲೋಕಸಭಾ ಚುನಾವಣೆಗಾಗಿ ಅಮಿತ್ ಷಾ - ನಡ್ಡಾ ಚರ್ಚೆ**
ನವದೆಹಲಿ : ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಸಮಾಲೋಚನೆ ನಡೆಸಿದ್ದಾರೆ. ಮೊದಲ ಬಾರಿಯ ಮತದಾರರನ್ನು ವಿಶೇಷವಾಗಿ ಸೆಳೆಯುವ ಪ್ರಯತ್ನ ನಡೆಸಲು ಪಕ್ಷ ನಿರ್ಧರಿಸಿದೆ. ಒ.ಬಿ.ಸಿ., ಪರಿಶಿಷ್ಟರು, ಯುವಕರು ಹಾಗೂ ಮಹಿಳೆಯರ ಪರವಾಗಿ ರೂಪಿಸಿರುವ ಯೋಜನೆಗಳನ್ನು ಪ್ರಮುಖವಾಗಿ ಬಿಂಬಿಸಲು ಪಕ್ಷ ಮುಂದಾಗಲಿದೆ.

**ರಸ್ತೆ ಸುರಕ್ಷತೆ ಸರ್ಕಾರದ ಆದ್ಯತೆ : ಗಡ್ಕರಿ**
ನವದೆಹಲಿ : ರಸ್ತೆ ಸುರಕ್ಷತೆ ಸರ್ಕಾರದ ಅತಿ ದೊಡ್ಡ ಆದ್ಯತೆಯಾಗಿದೆ. 2030ರ ವೇಳೆಗೆ ರಸ್ತೆ ಅಪಘಾತಗಳಲ್ಲಿ ಸಂಭವಿಸುವ ಸಾವುಗಳನ್ನು ಅರ್ಧದಷ್ಟು ಕಡಿಮೆ ಮಾಡಲು ಸರ್ಕಾರ ಗುರಿ ಹೊಂದಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

**ಮಥುರಾ : ಮಸೀದಿ ಸಮೀಕ್ಷೆಯ ಆದೇಶಕ್ಕೆ ತಡೆ**
ನವದೆಹಲಿ : ಮಥುರಾದ ಕೃಷ್ಣ ಜನ್ಮಭೂಮಿ ದೇವಾಲಯಕ್ಕೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿ ಸಂಕೀರ್ಣದ ಸಮೀಕ್ಷೆಗಾಗಿ ಅಲಹಾಬಾದ್ ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ಹಾಕಿದೆ.

## ಕೋಡಿಹಳ್ಳಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಶ್ರೀ ಬಸವರಾಜ ಗುರೂಜಿ ಭೇಟಿ

ದಾವಣಗೆರೆ,ಜ.16- ನಗರದ ಕೋಡಿಹಳ್ಳಿ ಕ್ಯಾಂಪಿನ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಕಂಚಿಕೆರೆ ಶ್ರೀ ಬಿದ್ದ ಹನುಮನ ಮಟ್ಟಿ ವೀರಾಂಜನೇಯ ಸ್ವಾಮಿ ಕ್ಷೇತ್ರದ ಶ್ರೀ ಬಸವರಾಜ ಗುರೂಜಿ ಭೇಟಿ ನೀಡಿ ಹಿಮಾಲಯದ ಗಂಗಾ ಜಲದಿಂದ ಪ್ರೋಕ್ಷಿಸಿ ಪೂಜೆ ಮಾಡಿದರು. ಕ್ಯಾಂಪಿನಲ್ಲಿರುವ ಈ ಮಠ ಕೊಟ್ಟೂರಿಗೆ ಪಾದಯಾತ್ರೆ ಮೂಲಕ ತೆರಳುವ ಭಕ್ತರಿಗೆ ಇಲ್ಲಿ ವಿಶ್ರಾಂತಿ ಪಡೆದು ಮುಂದೆ ಸಾಗಲು ಅನುಕೂಲವಾಗಿದೆ ಎಂದು ಶ್ರೀ ಬಸವರಾಜ ಸ್ವಾಮಿ ಹೇಳಿದರು. ಈ ಸಂದರ್ಭದಲ್ಲಿ ಕಣಕುಪ್ಪಿ ಮುರುಗೇಶಪ್ಪ, ಸಂಗಪ್ಪ ತೋಟದ, ಚನ್ನಪ್ಪ, ಪ್ರಭು, ಪ್ರಕಾಶ್ ಹೊಸಮನಿ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ದಿಂಡಿ ಮಹೋತ್ಸವ

ಹರಿಹರ, ಜ.16- ನಗರದ ಸಹಸ್ರಾರ್ಜುನ ವೃತ್ತದಲ್ಲಿರುವ ಎಸ್.ಎಸ್.ಕೆ. ಸಮಾಜದ ಶ್ರೀ ವಿಠಲ ರುಕ್ಮಿಣಿ ದೇವಸ್ಥಾನದಲ್ಲಿ ದಿಂಡಿ ಮಹೋತ್ಸವ ಹಾಗೂ ನಾಮ ಸಪ್ತಾಹ ಕಾರ್ಯಕ್ರಮ ಮತ್ತು ಮಂಡಕ್ಕಿ ಫಳಹಾರ ವಿತರಣೆ, ಮಹಾಮಂಗಳಾರತಿ ಸೇರಿದಂತೆ ಪೂಜಾ ಕಾರ್ಯಗಳು ನಡೆದವು.

ಇದೇ ಸಂದರ್ಭದಲ್ಲಿ ಎಸ್.ಎಸ್.ಕೆ. ಸಮಾಜದವರು ಮತ್ತು ಭಾವಸಾರ ಕ್ಷತ್ರಿಯ ಸಮಾಜದ ಸಂತರು ಭಜನೆ ನಡೆಸಿಕೊಟ್ಟರು.

ಎಸ್.ಎಸ್.ಕೆ. ಸಮಾಜದ ಗೌರವ ಅಧ್ಯಕ್ಷ ಅಂಬಾ ಸಾ ಮೆಹರ್ವಾಡೆ, ಅಧ್ಯಕ್ಷ ನಾಗರಾಜ್ ಮೆಹರ್ವಾಡೆ, ಮೋಹನ್ ಕಿರೋಜಿ, ಕೃಷ್ಣ ಪೂಜಾರಿ, ಪರಶುರಾಮ್ ಕಾಟ್ವೆ, ತುಳಜಪ್ಪ ಭೂತೆ, ದುರ್ಗಾಸಾ ಕಾಟ್ವೆ, ರಮೇಶ್ ಕಾಟ್ವೆ, ಕೃಷ್ಣ ಪಿ ರಾಜೋಳ್ಳಿ, ಶಂಕರ್ ಸಾ, ವಾಸು ಮೆಹರ್ವಾಡೆ, ಅನಿಲ್ ಕಠಾರೆ, ಶ್ರೀಕಾಂತ್ ಮೆಹರ್ವಾಡೆ, ಅಂಬುಜಾ ಮಹೆರ್ವಾಡೆ, ಸೇವಂತಿ ಬಾಯಿ ಕೃಷ್ಣ ಸಾ ಭೂತೆ, ಅಶೋಕ ಭೂತೆ, ಮಂಜು ಮೆಹರ್ವಾಡೆ, ಅಂಬಾಸಾ ಮೆಹರ್ವಾಡೆ, ಮೋತಿಲಾಲ್ ಕಿರೋಜಿ, ಸುಧಾ ಸೋಳಂಕಿ, ಸಾಕಮ್ಮ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಭೋವಿ ಸಮಾಜದ ಉದ್ಧಾರ ಶಿಕ್ಷಣದಿಂದ ಮಾತ್ರ ಸಾಧ್ಯ

### ಹರಪನಹಳ್ಳಿಯಲ್ಲಿನ ಶ್ರೀ ಸಿದ್ದರಾಮೇಶ್ವರರ ಜಯಂತ್ಯೋತ್ಸವದಲ್ಲಿ ಪುರಸಭೆ ಹಿರಿಯ ಸದಸ್ಯ ಎಂ.ವಿ. ಅಂಜಿನಪ್ಪ

ಹರಪನಹಳ್ಳಿ, ಜ. 16 - ಸಮಾಜದ ಉದ್ದಾರ ಶಿಕ್ಷಣದಿಂದ ಮಾತ್ರ ಸಾಧ್ಯ, ಹಾಗಾಗಿ ಮಕ್ಕಳ ಕೈಗೆ ಗುದ್ದಲಿ, ಸಲಿಕೆ, ಹಾರೆ, ಕೊಡುವ ಬದಲು ಲೇಖನಿಯನ್ನು ಕೊಡಿ ಎಂದು ಪುರಸಭೆ ಹಿರಿಯ ಸದಸ್ಯ ಎಂ.ವಿ. ಅಂಜಿನಪ್ಪ ಹೇಳಿದರು.



ಪಟ್ಟಣದ ಸಾಮರ್ಥ್ಯಸೌಧ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಏರ್ಪಡಿಸಿದ್ದ ಶ್ರೀ ಸಿದ್ದರಾಮೇಶ್ವರರ ಜಯಂತ್ಯೋತ್ಸವ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಬಳಿಕ ಅವರು ಮಾತನಾಡಿದರು.

ಶಿಕ್ಷಣದಿಂದಲೇ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚಿಸಲು ಸಾಧ್ಯವಾಯಿತು. ಎ.ಪಿ.ಜೆ. ಅಬ್ದುಲ್ ಕಲಾಂರವರು ವಿಜ್ಞಾನಿಯಾಗಿ ದೇಶದ ಉನ್ನತ ಹುದ್ದೆ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದರು ಎಂದು ಸ್ಮರಿಸಿದರು.

ಇಂದು ಜಯಂತಿಗಳು ಕೇವಲ ಫೋಟೋ ಇಟ್ಟು, ಪೂಜೆಗೆ ಮಾತ್ರ ಸೀಮಿತವಾಗಿರುವುದು ವಿಷಾದನೀಯ ಎಂದ ಅವರು ಮಹರ್ಷಿ ವಾಲ್ಮೀಕಿ, ಮಾದಾರ ಚನ್ನಯ್ಯ, ಕನಕದಾಸರು, ಬಸವಣ್ಣ ಸೇರಿದಂತೆ ಹಲವು ದಾರ್ಶನಿಕರು ಕೇವಲ ಒಂದು ಜಾತಿಗೆ ಸೀಮಿತರಾದವರಲ್ಲ ಅವರ ಆದರ್ಶ ಜೀವನ ಇಡೀ ಮನುಕುಲಕ್ಕೆ ಮಾದರಿಯಾಗಿದ್ದು, ಇಂದಿನ ಯುವ ಸಮೂಹ ದಾರ್ಶನಿಕರ ಜೀವನ ಸಾಧನೆಗಳನ್ನು ಅಳವಡಿಸಿಕೊಂಡು ಸನ್ಮಾರ್ಗ ದಲ್ಲಿ ನಡೆದು ಉತ್ತಮ ಜೀವನ ಕಟ್ಟಿಕೊಳ್ಳಲಿ ಎಂದರು.

ಸಿದ್ದರಾಮೇಶ್ವರರು ಸುಮಾರು 800 ವರ್ಷಗಳ ಹಿಂದೆಯೇ ರೈತರಿಗೆ ನೀರಾವರಿ ಸೌಲಭ್ಯ, ಪ್ರಾಣಿ, ಪಕ್ಷಿಗಳ ಸಂಕುಲಕ್ಕೆ ಕೆರೆ, ಕಟ್ಟೆಗಳನ್ನು ನಿರ್ಮಿಸಿದ ಮಾಹಾನ್ ಚೇತನರಾಗಿದ್ದರು ಎಂದ ಅವರು, ಈ ಸಮುದಾಯ ಸರ್ಕಾರದ ಸೌಲಭ್ಯ ಪಡೆದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಸಮಾಜದಲ್ಲಿ ಸಬಲರಾಗಬೇಕು ಎಂದರು.

ಮಾಜಿ ಶಾಸಕ ಎಂ.ಪಿ. ರವೀಂದ್ರ ಅವರು ಭೋವಿ ಸಮಾಜಕ್ಕೆ 2 ಎಕರೆ ಭೂಮಿಯನ್ನು ನೀಡಿದ್ದರು. ಈಗ ಅವರ ಸಹೋದರಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಶಾಸಕರಾಗಿದ್ದಾರೆ. ನಮ್ಮ ಸಮಾಜಕ್ಕೆ ಒಂದು ಸುಸಜ್ಜಿತ ಸಮುದಾಯ ಭವನ ನಿರ್ಮಿಸಿ ಕೊಡಬೇಕು ಎಂದು ಅವರು ಮನವಿ ಮಾಡಿದರು.

ಕಲ್ಲು ಒಡೆಯುವುದು, ಮಣ್ಣು ತೆಗೆಯುವುದು ನಮ್ಮ ಸಮಾಜದ ಮೂಲ ವೃತ್ತಿಯಾಗಿದ್ದು, ಅವರಿಗೆ ಕಂದಾಯ ಇಲಾಖೆಯಿಂದ 1 ಅಥವಾ 2 ಎಕರೆ ಭೂಮಿ ಕೊಟ್ಟು ಸಹಕರಿಸಬೇಕು ಎಂದು ತಹಶೀಲ್ದಾರ್ ಜಿ.ವಿ. ಗಿರೀಶ್ ಬಾಬು ಅವರಿಗೆ ಮನವಿ ಮಾಡಿದರು. ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮನೆ ಇಲ್ಲದವರಿಗೆ ಮನೆಗಳನ್ನು ಕೊಡುವುದರ ಮೂಲಕ ಸೂರು ಕಲ್ಪಿಸುವಂತೆ ತಾಪಂ ಇಓ ಕೆ.ಆರ್. ಪ್ರಕಾಶ್ ಅವರಿಗೆ ಮನವಿ ಮಾಡಿದರು.

ಪ್ರಗತಿಪರ ಚಿಂತಕ, ಸಾಹಿತಿ ಇಸ್ಮಾಯಿಲ್ ಎಲಿಗಾರ ಮಾತನಾಡಿ, 12ನೇ ಶತಮಾನದಲ್ಲಿ ಶರಣರ ಪರಂಪರೆಯಲ್ಲಿ ಮಹಾಮನೆಯಲ್ಲಿ ಜಾತಿ ಭೇದವೆನ್ನದೆ ತಮ್ಮದೇಯಾದ ವಚನಗಳ ಮೂಲಕ ಕಾಯಕದಲ್ಲಿ ತೊಡಗಿದ್ದರು. ಎಂದ ಅವರು, ದಾರ್ಶನಿಕರನ್ನು ಜಾತಿಗಳ ಜೈಲಿನಲ್ಲಿ ಬಂಧಿಸಿದ್ದು, ಅದರಿಂದ ಬಿಡುಗಡೆ ಮಾಡಿ, ಮೌಢ್ಯತೆಯಿಂದ ಹೊರಬಂದು, ಶಿಕ್ಷಣ ಪಡೆದು ಸಮಾನತೆಯನ್ನು ಎತ್ತಿಹಿಡಿಯುವ ಕೆಲಸ ಮಾಡಬೇಕು ಎಂದರು.

ಆಯ್ಕೆ ಶ್ರೇಣಿ ಉಪನ್ಯಾಸಕ ತಿರುಮಲೇಶ್ ತಿಮ್ಮಪ್ಪನವರು ವಿಶೇಷ ಉಪನ್ಯಾಸ ನೀಡಿದರು. ತಹಶೀಲ್ದಾರ್ ಗಿರೀಶಬಾಬು ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ತಾ.ಪಂ. ಇಓ ಕೆ. ಆರ್. ಪ್ರಕಾಶ್, ಭೋವಿ ಸಮುದಾಯದ ತಾಲ್ಲೂಕು ಅಧ್ಯಕ್ಷ ಎಂ.ಬಿ. ಅಂಜಿನಪ್ಪ, ಪುರಸಭೆ ಸದಸ್ಯರಾದ ಲಾಟಿ ದಾದಾಪೀರ್, ಉದ್ದಾರ ಗಣೇಶ, ವಕೀಲ ವೆಂಕಟೇಶ್, ಗೊಂಗಡಿ ನಾಗರಾಜ, ವಸಂತಪ್ಪ, ಶಂಕರ, ದೈಹಿಕ ಶಿಕ್ಷಕ ದೇವರಾಜ, ಬೆಂಡಿಗೇರಿ ಗುರುಸಿದ್ದಪ್ಪ, ನೀಲಗುಂದ ಮಹಾಂತೇಶ್ ಸೇರಿದಂತೆ ಇತರರು ಇದ್ದರು.

## ನಿರಾಶ್ರಿತರಿಗೆ ಹೊದಿಕೆ, ಊಟದ ವ್ಯವಸ್ಥೆ



ದಾವಣಗೆರೆ, ಜ. 16 - ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ವತಿಯಿಂದ ರೈಲ್ವೇ ಸ್ಟೇಷನ್, ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್, ಹಳೇ ಬಸ್ ಸ್ಟಾಂಡ್, ಕೆ.ಆರ್. ತರಕಾರಿ ಮಾರ್ಕೆಟ್ ದಾರಿಯಲ್ಲಿ ಚಳಿಯಿಂದ ಬಳಲುತ್ತಾ ಮಲಗಿರುವವರಿಗೆ ಹಬ್ಬದ ಪ್ರಯುಕ್ತ ಊಟದ ವ್ಯವಸ್ಥೆ, ಹೊದಿಕೆಗಳನ್ನು ವಿತರಣೆ ಮಾಡುವ ಮುಖಾಂತರ ಸೇವೆಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲಾ ಪದಾಧಿಕಾರಿಗಳು ಪರಶುರಾಮ್ ಜಿ.ಎಸ್. ರಾಘವೇಂದ್ರ, ಕೆ.ವಿ. ಕೊಟ್ರೇಶ್, ಡಿ.ಜೆ. ನವೀನ್, ಗುಬ್ಬಿ ಉಮೇಶ್ ಎನ್ ಭಾಗವಹಿಸಿದ್ದರು ಎಂದು ದಾವಣಗೆರೆ ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿ ಟೇಬಲ್ ಟ್ರಸ್ಟ್ ಅಧ್ಯಕ್ಷ ಪೋತುಲ ಶ್ರೀನಿವಾಸ್ ತಿಳಿಸಿದರು.

## ಸರ್ಕಾರಿ ನೌಕರರ ಬೇಡಿಕೆಗಳ ಈಡೇರಿಕೆಗೆ ಅಧಿವೇಶನದಲ್ಲಿ ಪ್ರಸ್ತಾಪ

ಹರಿಹರ, ಜ. 16 - ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ 7 ನೇ ವೇತನ ಆಯೋಗದ ವರದಿ ಪಡೆದು ಜಾರಿಗೊಳಿಸುವುದು. ಎನ್.ಪಿ.ಎಸ್ ಯೋಜನೆಯನ್ನು ರದ್ದುಪಡಿಸಿ ಹಳೇ ಪಿಂಚಣಿ ಯೋಜನೆ ಜಾರಿಗೊಳಿಸುವುದು ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೊಳಿಸುವುದು. ಸೇರಿದಂತೆ, ವಿವಿಧ ಬೇಡಿಕೆಗಳನ್ನು ತಕ್ಷಣದಿಂದ ಈಡೇರಿಸಲು ಒತ್ತಾಯಿಸಿ, ಸರ್ಕಾರದ ಮೇಲೆ ಒತ್ತಡ ತರುವಂತೆ ಕೋರಿ ಹರಿಹರ ತಾಲ್ಲೂಕು ಸರ್ಕಾರಿ ನೌಕರರು ಸಂಘದ ವತಿಯಿಂದ ಶಾಸಕ ಬಿ.ಪಿ. ಹರೀಶ್ ರವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಸಂಘದ ಮನವಿಯನ್ನು ಸ್ವೀಕರಿಸಿ ಮಾತನಾಡಿದ ಶಾಸಕರು, ನೌಕರರ ಬೇಡಿಕೆಗಳು ನ್ಯಾಯಯುತವಾಗಿವೆ. ನೌಕರರ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಶೀಘ್ರದಲ್ಲಿ ಪತ್ರ ಬರೆದು ಒತ್ತಡ ತರುತ್ತೇನೆ ಹಾಗೂ ಮುಂಬರುವ ಅಧಿವೇಶನದಲ್ಲಿ ನೌಕರರ ಬೇಡಿಕೆಗಳ ಕುರಿತು ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇನೆ. ಮುಂದಿನ ದಿನಗಳಲ್ಲಿ ನೌಕರರ ಬೇಡಿಕೆಗಳು ಈಡೇರಿರುವವರೆಗೂ ನಿಮ್ಮ ಪರವಾಗಿರುತ್ತೇನೆ ಎಂದು ತಿಳಿಸಿದರು.




**ಹರಿಹರದಲ್ಲಿ ಶಾಸಕ ಹರೀಶ್**

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ಗೌರವಾಧ್ಯಕ್ಷ ಉಮ್ಮಣ್ಣ ಎಂ. ಖಜಾಂಚಿ ರೇವಣಸಿದ್ದಪ್ಪ ಅಂಗಡಿ, ಕಾರ್ಯದರ್ಶಿ ಎಂ. ಬಿ. ಮಂಜುನಾಥ್. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ. ಚಂದ್ರಪ್ಪ, ಕಾರ್ಯದರ್ಶಿ ಶರಣಕುಮಾರ್ ಹೆಗಡೆ, ಬಿದರಿ ಮಂಜಪ್ಪ, ಪ್ರೌಢಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಡಿ.ಎಂ. ಮಂಜುನಾಥ ಸ್ವಾಮಿ, ತಾಲ್ಲೂಕು ಅಧ್ಯಕ್ಷ ಈಶಪ್ಪ ಬೂದಿಹಾಳ, ಕಾರ್ಯದರ್ಶಿ ಧನ್ಯ ಕುಮಾರ್, ನೌಕರರ ಸಂಘದ ಉಪಾಧ್ಯಕ್ಷೆ ವೈ.ಪಿ. ಸಾಕಮ್ಮ ಪ್ರಕಾಶ್, ಹರೀಶ್ ನೋಟಗಾರ್, ಬಿ. ಶಿವಮೂರ್ತಿ, ಶೋಭಾ ನಾರಾಯಣ ರೆಡ್ಡಿ, ಮಾಜಿ ಅಧ್ಯಕ್ಷರಾದ ಎಂ. ವಿ. ಹೊರಕೇರಿ, ಸಂಘದ ನಿರ್ದೇಶಕ ಡಿ.ಟಿ. ಮಂಜಪ್ಪ, ಬಿ. ಎಚ್. ಶಿವಕುಮಾರ್, ಬಿ.ಎಸ್. ಜಗದೀಶ್, ಮುಸ್ತಾಕ್ ಅಹಮದ್, ರೂಪ ಕಾಮತ್, ವಿ.ಬಿ. ಕೊಟ್ರೇಶಪ್ಪ, ಈರಮ್ಮ ಎಲಿಗಾರ್ , ನಿಂಗಪ್ಪ , ಆದರ್ಶ, ಎಸ್ ಮಂಜುನಾಥ್, ಮತ್ತು ಇತರೆ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ವಿವಿಧ ವೃಂದ ಸಂಘಗಳ ಪದಾಧಿಕಾರಿಗಳು ಹಾಗೂ ನೌಕರರು ಹಾಜರಿದ್ದರು.



# ಔಷಧಿ ಸಿಂಪರಣೆಗೆ ಡ್ರೋನ್ ಬಳಕೆಯಿಂದ ನೀರು, ಸಮಯ ಉಳಿತಾಯ



### ಬೇಸಾಯ ತಜ್ಞ ಮಲ್ಲಿಕಾರ್ಜುನ ಅಭಿಪ್ರಾಯ

ಚನ್ನಗಿರಿ, ಜ. 16 - ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ (ದಾವಣಗೆರೆ), ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ (ಶಿವಮೊಗ್ಗ), ಕೃಷಿ ವಿಜ್ಞಾನ ಕೇಂದ್ರ (ಉಡುಪಿ) ಹಾಗೂ ಕೃಷಿ ಸಂಶೋಧನಾ ಕೇಂದ್ರ (ಕತ್ತಲಗೆರೆ) ಇವರ ಸಂಯುಕ್ತ ಆಶ್ರಯದಲ್ಲಿ ಡ್ರೋನ್ ಮುಖಾಂತರ ಕಡಲೆ ಬೆಳೆಗೆ ಔಷಧಿ ಸಿಂಪಡಣೆಯ ಪ್ರಾತ್ಯಕ್ಷಿಕೆಯನ್ನು ಚನ್ನಗಿರಿ ತಾಲ್ಲೂಕಿನ ಭೀಮನೇರಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಸ್ತರಣಾ ನಿರ್ದೇಶಕ ಡಾ. ಗುರುಮೂರ್ತಿ ಮಾತನಾಡಿ, ಕೃಷಿಯಲ್ಲಿ ಡ್ರೋನ್ ಬಳಕೆ ಬಗ್ಗೆ ರೈತರು ಮಾಹಿತಿ ಪಡೆದುಕೊಳ್ಳಬೇಕು ಎಂದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ದೇವರಾಜ್ ಟಿ.ಎನ್. ಮಾತನಾಡಿ, ಡ್ರೋನ್ ಮೂಲಕ ಔಷಧಿ ಸಿಂಪಡಣೆಯ ಪ್ರಾತ್ಯಕ್ಷಿಕೆಯ ಲಾಭವನ್ನು ರೈತರು ಪಡೆದುಕೊಳ್ಳುವುದರ ಜೊತೆಗೆ ಹೊಸ ತಂತ್ರಜ್ಞಾನಗಳ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು ಎಂದರು.

ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಬಿ. ಓ. ಮಾತನಾಡಿ, ಡ್ರೋನ್ ಬಳಕೆಯಿಂದ ರೈತರಿಗೆ ಸಮಯ ಮತ್ತು ನೀರಿನ ಉಳಿತಾಯವನ್ನು ಮಾಡುವುದರ ಜೊತೆಗೆ ಕೂಲಿ ಆಳುಗಳ ಸಮಸ್ಯೆಗೆ ಒಂದು ಪರಿಹಾರವಾಗುತ್ತದೆ. ಒಂದು ಎಕರೆ ಪ್ರದೇಶವನ್ನು 10 ರಿಂದ 15 ನಿಮಿಷಗಳಲ್ಲಿ ಡ್ರೋನ್ ಸಿಂಪರಣೆ ಮಾಡುವುದರಿಂದ ರೈತರಿಗೆ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ. ಸುಮಾರು 150 ಎಕರೆ ಪ್ರದೇಶದಲ್ಲಿ ಬೆಳೆದಿರುವ ಕಡಲೆ ಬೆಳೆಗೆ ಪ್ರಾತ್ಯಾಕ್ಷಿಕೆ ಮೂಲಕ ಔಷಧಿ ಸಿಂಪರಣೆ ಮಾಡಲಾಗುತ್ತದೆ.

ಕೃಷಿ ವಿಜ್ಞಾನ ಕೇಂದ್ರ, ಉಡುಪಿಯ ಡಾ. ನವೀನ್ ಮಾತನಾಡಿ, ಪ್ರಸ್ತುತ ಕಡಲೆ ಬೆಳೆಗೆ ಕಡಲೆ ಮ್ಯಾಜಿಕ್ ಮತ್ತು ಬೇವಿನ ಕೀಟನಾಶಕವನ್ನು ಸಿಂಪರಣೆ ಮಾಡುವುದು ಸೂಕ್ತ ಎಂದರು. ಡ್ರೋನ್ ಮೂಲಕ ಸಿಂಪರಣೆ ಮಾಡುವ ಮೊದಲು ತಜ್ಞರನ್ನು ವಿಚಾರಿಸುವುದು ಸೂಕ್ತ ಎಂದರು.

ಕಾರ್ಯಕ್ರಮದಲ್ಲಿ ಉಡುಪಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಧನಂಜಯ್ಯ, ಡಾ. ಬಿರಾದಾರ್ ಹಾಗೂ ಪ್ರಗತಿಪರ ಕೃಷಿಕರು ಭಾಗವಹಿಸಿದ್ದರು.

# ಮಲೇಬೆನ್ನೂರಿನಲ್ಲಿ ಶ್ರೀ ಗುರುಸಿದ್ಧರಾಮೇಶ್ವರರ ಜಯಂತಿ



ಮಲೇಬೆನ್ನೂರು, ಜ. 16- ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಮಹಾಶಿವಯೋಗಿ ಶ್ರೀ ಗುರು ಸಿದ್ಧರಾಮೇಶ್ವರರ 851 ನೇ ಜಯಂತಿಯನ್ನು ಆಚರಿಸಲಾಯಿತು. ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, ಪುರಸಭೆ ಸದಸ್ಯರಾದ ಭೋವಿ ಶಿವು, ಸಾಬೀರ್ ಅಲಿ, ಷಾ ಅಬ್ರಾರ್, ಭೋವಿಕುಮಾರ್, ಚಮನ್ ಷಾ, ಕೆ.ಪಿ. ಗಂಗಾಧರ್, ಯೂಸೂಫ್, ಭಾನುವಳ್ಳಿ ಸುರೇಶ್, ಭೋವಿ ಮಂಜಣ್ಣ, ಪುರಸಭೆ ಅಧಿಕಾರಿಗಳಾದ ದಿನಕರ್, ಉಮೇಶ್, ನವೀನ್, ಮಮ್ತಾಜ್, ಪರಶುರಾಮ್ ಮತ್ತಿತರರು ಭಾಗವಹಿಸಿದ್ದರು.


## ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ಅವರಿಗೆ ಅಭಿನಂದನೆಗಳು



ದಾವಣಗೆರೆ, ಜ.16 - ನೂತನವಾಗಿ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ರಾಜಶೇಖರ್ ನಾಗಪ್ಪ ಅವರಿಗೆ ಬಿಜೆಪಿ ಕಛೇರಿಯಲ್ಲಿ ಶ್ರೀ ಗುರು ರಾಘವೇಂದ್ರ ಸ್ವಾಮಿಯವರ ಫೋಟೋ ಕೊಡುವುದರ ಮುಖಾಂತರ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಟಿ.ಜಿ. ರವಿಕುಮಾರ್, ಬಿಜೆಪಿ ಮುಖಂಡರಾದ ಎನ್.ಎಚ್. ಹಾಲೇಶ್, ಬಾತಿ ಸಿದ್ದೇಶ್, ಬಿಶ್ವಜಿತ್ ಮುಂತಾದವರು ಉಪಸ್ಥಿತರಿದ್ದರು. Advt.


## ವಿಮಾನಗಳ ವಿಳಂಬ

(1ನೇ ಪುಟದಿಂದ) ನಮ್ಮ ವಿಮಾನ ಹಾರಾಟ ಆರಂಭಿಸಿತು. ಈ ಬಗ್ಗೆ ನಾವು ದೂರು ದಾಖಲಿಸಲಿದ್ದೇವೆ ಎಂದವರು ಹೇಳಿದ್ದಾರೆ. ಕಳೆದ ವಾರ ನಟಿಯರಾದ ರಾಧಿಕಾ ಆಪ್ಟೆ ಹಾಗೂ ಸುರಭಿ ಚಂದನಾ ಅವರು ತಾವು ಎದುರಿಸಿದ ಸಮಸ್ಯೆ ಬಗ್ಗೆ ತಿಳಿಸಿದ್ದರು. ಗಂಟೆಗಟ್ಟಲೆ ವಿಮಾನದ ಹಾರಾಟ ವಿಳಂಬವಾಗಿತ್ತು, ಇದರಿಂದ ಮಾನಸಿಕ ಪೀಡನೆಯಾಗಿತ್ತು ಎಂದವರು ಹೇಳಿದ್ದರು.

ವಿಮಾನ ಹಾರಲಿದೆ ಎಂದು ನಮ್ಮನ್ನು ಹತ್ತಿಸಿಕೊಳ್ಳಲಾಗಿತ್ತು. ಆದರೆ, ಗಂಟೆಯ ನಂತರವೂ ವಿಮಾನದ ಹಾರಾಟ ಆರಂಭವಾಗಿಲ್ಲ. ಸಣ್ಣ ಮಕ್ಕಳೊಂದಿಗೆ ಪ್ರಯಾಣಿಕರಿಗೆ ಕೂಡಿ ಹಾಕಿದಂತಹ ಅನುಭವವಾಗಿದೆ ಎಂದು ನಟಿ ರಾಧಿಕಾ ಆಪ್ಟೆ ಹೇಳಿದ್ದರು.

ಮಂಜಿನ ಕಾರಣದಿಂದ ಉತ್ತರ ಭಾರತದ ವಿಮಾನಗಳ ಹಾರಾಟದ ಮೇಲೆ ಪರಿಣಾಮವಾಗುತ್ತಿದೆ. ಇದು ಇತರೆ ರಾಜ್ಯಗಳ ಮೇಲೂ ಪರಿಣಾಮ ಬೀರುತ್ತಿದೆ. ಸೋಮವಾರದಂದು ದೆಹಲಿ ಒಂದರಲ್ಲೇ 168 ವಿಮಾನಗಳ ಹಾರಾಟ ವಿಳಂಬವಾಗಿದ್ದರೆ, 100 ವಿಮಾನಗಳ ಹಾರಾಟ ರದ್ದುಗೊಳಿಸಲಾಗಿತ್ತು.

## ದಾಖಲೆ ತೆರಿಗೆ ಸಂಗ್ರಹ

(1ನೇ ಪುಟದಿಂದ) ಭಾರತಕ್ಕೆ ಆಧುನಿಕ ತೆರಿಗೆ ವ್ಯವಸ್ಥೆ ದೊರೆತಿದೆ. ಕೇಂದ್ರ ಸರ್ಕಾರ ಆದಾಯ ತೆರಿಗೆ ವ್ಯವಸ್ಥೆಯಲ್ಲೂ ಸುಧಾರಣೆ ತಂದಿದೆ ಎಂದವರು ಹೇಳಿದರು. ಮುಖಾ ಮುಖಿ ರಹಿತ ತೆರಿಗೆ ಅಂದಾಜು ವ್ಯವಸ್ಥೆ ಜಾರಿಗೆ ತಂದ ನಂತರ ದಾಖಲೆ ಪ್ರಮಾಣದ ತೆರಿಗೆ ಸಂಗ್ರಹವಾಗುತ್ತಿದೆ ಎಂದು ಮೋದಿ ಹೇಳಿದರು.

# 10 ರೂಪಾಯಿ ನೋಟುಗಳ ಕೊರತೆಯೂ ಮತ್ತು ಚಲಾವಣೆಯಾಗದ ನಾಣ್ಯಗಳು...!

**ಉತ್ತಂಗಿ ಕೊಟ್ರೇಶ್**





**ಭಾರತೀಯ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ವಿಶಿಷ್ಟ ಲಕ್ಷಣಗಳುಳ್ಳ ನಾಣ್ಯಗಳನ್ನು ಬಿಡುಗಡೆ ಮಾಡುತ್ತದೆ. ಕೆಲವರು ಈ ನಾಣ್ಯಗಳ ಅಸಲಿತನದ ಬಗ್ಗೆ ಶಂಕೆ ವ್ಯಕ್ತಪಡಿಸಿ ವ್ಯಾಪಾರಸ್ಥರು, ಅಂಗಡಿಯವರು ಮತ್ತು ಸಾರ್ವಜನಿಕರ ಮನಸ್ಸಿನಲ್ಲಿ ಶಂಕೆ ಬಿತ್ತಿರುತ್ತಾರೆ. ಅಲ್ಲದೇ, ಯಾವುದೇ ಹಿಂಜರಿಕೆ ಇಲ್ಲದೇ ಈ ನಾಣ್ಯಗಳನ್ನು ಎಂದಿನಂತೆಯೇ ಶಾಸನಬದ್ಧ ಚಲಾವಣೆಯಾಗಿ ಸ್ವೀಕರಿಸುವುದನ್ನು ಮುಂದುವರೆಸುವಂತೆ ಈಗಾಗಲೇ ರಿಸರ್ವ್ ಬ್ಯಾಂಕ್ ಕೂಡಾ ಸೂಚನೆ ನೀಡಿದೆ.**

ಈ ಹಿಂದೆಲ್ಲಾ ಅನೇಕ ಬಾರಿ ಚಿಲ್ಲರೆ ನಾಣ್ಯಗಳ ಸಮಸ್ಯೆಯನ್ನು ನಾವು ಕಾಣುತ್ತಿದ್ದೆವು. ಆದರೆ ಈಗ 10 ಮತ್ತು 20 ರೂ. ಮುಖ ಬೆಲೆಯ ನೋಟುಗಳ ಸಮಸ್ಯೆ ಕಾಡತೊಡಗಿದೆ.

ಅದರಲ್ಲಿಯೂ 10 ರೂ. ನೋಟುಗಳು ಒಂದು ರೀತಿ ಸಂಪೂರ್ಣವಾಗಿ ಕಾಣೆಯಾಗಿರುವಂತೆ ಭಾಸವಾಗುತ್ತದೆ. ಇದ್ದರೂ ಆ ನೋಟುಗಳು ತೀರಾ ಹಾಳಾಗಿ ಚಲಾವಣೆಗೆ ಯೋಗ್ಯವಿಲ್ಲದಂತಾಗಿವೆ. ಹಾಗಾಗಿ ಈ ಹರಕು ನೋಟುಗಳನ್ನು ಅಂಗಡಿ ಮುಂಗಟ್ಟುಗಳಲ್ಲಿ ಸ್ವೀಕರಿಸುತ್ತಿಲ್ಲ.

ಬ್ಯಾಂಕುಗಳಲ್ಲಿಯೂ ಸಹ ಈ 10 ರೂ. ಗಳ ನೋಟುಗಳು ಲಭ್ಯವಿಲ್ಲದಾಗಿದೆ. ಕಳೆದ ದೀಪಾವಳಿ ಸಂದರ್ಭದಲ್ಲಿಯೇ ಲಕ್ಷ್ಮಿ ಪೂಜೆಗೂ ಸಹ ಯಾವ ಬ್ಯಾಂಕುಗಳೂ 10-20ರ ಹೊಸ ನೋಟುಗಳನ್ನು ನೀಡಲಿಲ್ಲ. ಬದಲಾಗಿ 50, 100, 200 ಮತ್ತು 500ರ ಹೊಸ ನೋಟುಗಳನ್ನು ಮಾತ್ರ ಅತ್ಯಂತ ಆಪ್ತ, ಆಯ್ದ ಗ್ರಾಹಕರಿಗೆ ನೀಡಿದವು.

ಹಾಗಾಗಿ ಎಲ್ಲೆಡೆ ಈ ನೋಟಿನ ಅಭಾವ ತಲೆ ದೋರಿದ್ದು, ಹೋಟೆಲ್, ಅಂಗಡಿಗಳ ಚಿಲ್ಲರೆ ಮಾರಾಟಗಾರರು ಪರದಾಡುವಂತಾಗಿದೆ. ಈ ಸಂಬಂಧ ಗ್ರಾಹಕರು ಮತ್ತು ಅಂಗಡಿಗಳವರ ಮಧ್ಯೆ ಮಾತಿನ ಚಕಮಕಿಗಳು ನಡೆಯುತ್ತಿವೆ. ಚಿಲ್ಲರೆ ಇರಲಿ, ಹತ್ತು ರೂ.ಗಳು ಇಲ್ಲ ಎಂಬ ಕಾರಣಕ್ಕೆ ಅಂಗಡಿಯವರು ಕೊಡುವ ಬಿಸ್ಕತ್, ಚಾಕೋಲೇಟ್ ಇತ್ಯಾದಿ ವಸ್ತುಗಳನ್ನು ಅನಿವಾರ್ಯವಾಗಿ ಕೊಂಡುಕೊಳ್ಳುವ ಕರ್ಮ ಗ್ರಾಹಕರದ್ದಾಗಿದೆ.

ಸಮಾಧಾನದ ಸಂಗತಿ ಎಂದರೆ ಗೂಗಲ್ ಪೇ, ಫೋನ್ ಪೇ ಸೌಲಭ್ಯವಿರುವವರು ಹಣ ವರ್ಗಾವಣೆ ಮಾಡುವುದರಿಂದಾಗಿ ಚಿಲ್ಲರೆ ಸಮಸ್ಯೆ ತುಸು ಕಡಿಮೆ ಎನಿಸಿದರೂ, ಸಂಪೂರ್ಣ ಸಮಸ್ಯೆ ನೀಗಿಸಲು ಸಾಧ್ಯವಿಲ್ಲವಾಗಿದೆ. ಈ ಸೌಲಭ್ಯ ಹೆಚ್ಚಿನ ಜನರು ಪಡೆಯಲಿ ಎಂಬ ಕಾರಣಕ್ಕೆ ಸಣ್ಣ ಮುಖಬೆಲೆ ನೋಟುಗಳನ್ನು ಮುದ್ರಿಸುತ್ತಿಲ್ಲ ಎನ್ನುವ ದೂರೂ ಕೇಳಿ ಬರುತ್ತಿದೆ.

ಯಾವುದೋ ಗಾಳಿ ಸುದ್ದಿಗೆ ಒಳಗಾಗಿ 5ರೂ. ಮುಖಬೆಲೆಯ ನೋಟುಗಳನ್ನು ಯಾರೂ ಸ್ವೀಕರಿಸುತ್ತಿಲ್ಲ. ಆ ಜಾಗದಲ್ಲಿ ನಾಣ್ಯಗಳು ಹರಿದಾಡುತ್ತಿವೆ. ಆದರೆ 10 ರೂ. ನಾಣ್ಯಗಳು ಇದ್ದೂ ಇಲ್ಲದಂತಾಗಿವೆ. ಬೆಂಗಳೂರು, ಮಂಗಳೂರು ಸೇರಿದಂತೆ ಅನೇಕ ಕಡೆ ಈ ಹತ್ತರ ನಾಣ್ಯಗಳು ಚಲಾವಣೆಯಲ್ಲಿ ಇವೆ. ಆದರೆ ದಾವಣಗೆರೆ ಜಿಲ್ಲೆ ಸೇರಿದಂತೆ ಅನೇಕ ನಗರಗಳಲ್ಲಿ ಆ ಪರಿಸ್ಥಿತಿ ಇಲ್ಲವಾಗಿದೆ. ಹಾಗಾಗಿ ಬ್ಯಾಂಕುಗಳಲ್ಲಿ ಮಾತ್ರ ಸ್ವೀಕಾರವಾಗುವ ನಾಣ್ಯಗಳನ್ನು ಗ್ರಾಹಕ ಪಡೆಯುತ್ತಿಲ್ಲ. ಕಾರಣ ಹೊರಗಡೆ ಎಲ್ಲೂ ಚಲಾವಣೆ ಆಗದ ನಾಣ್ಯವನ್ನು ಗ್ರಾಹಕ ತೆಗೆದು ಕೊಂಡು ಏನು ಮಾಡುತ್ತಾನೆ. ಹಾಗಾಗಿ ಕೋಟ್ಯಾಂತರ ಮೊತ್ತದ 10ರ ನಾಣ್ಯಗಳು ಬ್ಯಾಂಕುಗಳಲ್ಲಿಯೇ ಕೊಳೆಯು ವಂತಾಗಿಬಿಟ್ಟಿದೆ.

10 ರೂ.ನ ನಾಣ್ಯಗಳನ್ನು ಚಲಾವಣೆಯಿಂದ ವಾಪಾಸ್ಸು ಪಡೆದಿರುವುದಿಲ್ಲ ಎಂದು ಹಲವಾರು ಬಾರಿ ರಿಜರ್ವ್ ಬ್ಯಾಂಕ್ ತಿಳಿಸಿದೆ. ಅಲ್ಲದೇ ಬ್ಯಾಂಕುಗಳು ಈ ನಾಣ್ಯಗಳನ್ನು ತಿರಸ್ಕರಿಸುವಂತಿಲ್ಲ ಎಂಬ ಸೂಚನೆ ನೀಡಿದೆ. ಆದರೂ ಚಲಾವಣೆ ಆಗುತ್ತಿಲ್ಲ.

ಅಷ್ಟಕ್ಕೂ ಎಲ್ಲಾ ಗ್ರಾಹಕರೂ ಸಹ ತಮ್ಮ ಬಳಿ ಇದ್ದಬದ್ದ ಎಲ್ಲಾ ಹತ್ತರ ನಾಣ್ಯಗಳನ್ನು ಈಗಾಗಲೇ ಬ್ಯಾಂಕುಗಳಿಗೆ ಜಮಾ ಮಾಡಿ ಬಿಟ್ಟಿದ್ದಾರೆ. ಬ್ಯಾಂಕುಗಳಿಗೆ ಈಗ ಒಳ ಹರಿವಿದೆ ಆದರೆ ಅದನ್ನು ಹೊರ ಹರಿವು ಮಾಡಿ ಚಲಾವಣೆಗೆ ಮುಂದಾದರೆ, ಈಗಿರುವ 10-20 ರೂ.ಗಳ ನೋಟಿನ ಸಮಸ್ಯೆ ಬಗೆಹರಿಸಬಹುಗಾಗಿದೆ ಎಂಬುದು ಬಹಳಷ್ಟು ಜನರ ಅಭಿಪ್ರಾಯವಾಗಿದೆ.

10 ರೂ.ಗಳ ನಾಣ್ಯವನ್ನು, ಮತ್ತೆ ಇಲ್ಲಿ ಚಲಾವಣೆಗೆ ತರಬೇಕು. ನಾಣ್ಯವನ್ನು ಸ್ವೀಕರಿಸದ ಅಂಗಡಿ-ಮುಂಗಟ್ಟುಗಳ ಮೇಲೆ ಕೇಸು ದಾಖಲು ಮಾಡಬೇಕು. ಹೀಗೆ ನಾಲ್ಕೈದು ಕೇಸುಗಳು ದಾಖಲಾದರೆ ನಾಣ್ಯದ ಚಲಾವಣೆ ಸುಸೂತ್ರ ವಾಗುತ್ತದೆ. ನೋಟುಗಳ ಸಮಸ್ಯೆಯೂ ನೀಗುತ್ತದೆ ಎಂಬ ಸಲಹೆಯನ್ನು ಹಿರಿಯ ನಾಗರಿಕ ಬಿಎಸ್ಸೆನ್ನೆಲ್ ಬಸವರಾಜಪ್ಪ, ಬೇಕರಿ ಗಣೇಶ್ ಮತ್ತು ಸಿದ್ದಣ್ಣ ಅವರು ನೀಡುತ್ತಾರೆ. ಇದು ಒಂದು ರೀತಿಯ ಉತ್ತಮ ಸಲಹೆಯೂ ಆಗಿದೆ ಎನ್ನಬಹುದಲ್ಲವೇ.?.

'ಬೆಕ್ಕಿಗೆ ಗಂಟೆ ಕಟ್ಟುವವರು ಯಾರು..?'

# ಹಟ್ಟಿ, ಹಾಡಿಗಳು ಬದಲಾಗುತ್ತಿಲ್ಲ

(1ನೇ ಪುಟದಿಂದ) ಹೇಳಿದರು.

ಶೈಕ್ಷಣಿಕವಾಗಿ ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದು, ನಿಜವಾದ ಶಿಕ್ಷಣ ನಮಗೆ ದೊರಕುತ್ತಿಲ್ಲ. ಸಂವಿಧಾನ ಬದ್ಧವಾಗಿ ಸರಿಯಾದ ಶಿಕ್ಷಣ ಶೋಷಿತರ ಮಕ್ಕಳಿಗೆ ಸಿಕ್ಕಿದ್ದರೆ ಎಸಿ, ಡಿಸಿಗಳು ಆಗಿರುತ್ತಿದ್ದರು ಎಂದರು.

ಪುರಾತನ ಕಾಲದಿಂದಲೂ ವೈದಿಕ ಧರ್ಮವನ್ನೇ ಹಿಂದೂ ಧರ್ಮವೆಂದು ಪ್ರತಿಪಾದಿಸುತ್ತಾ ಬರಲಾಗುತ್ತಿದ್ದು, ಶೋಷಿತರ ಮಧ್ಯೆಯೇ ಒಡಕುಂಟು ಮಾಡುವ ಪ್ರಯತ್ನಗಳು ನಡೆಯುತ್ತಿರುವುದು ವಿಷಾದದ ಸಂಗತಿ ಎಂದರು.

ಪೂರ್ವಭಾವಿ ಸಭೆ ನೇತೃತ್ವ ವಹಿಸಿಕೊಂಡಿದ್ದ ಕಾಂಗ್ರೆಸ್ ಮುಖಂಡ ಹೊದಿಗೆರೆ ರಮೇಶ್ ಮಾತನಾಡಿ, ಈ ದೇಶದ ಕೇವಲ ಮೂರು ಪ್ರತಿಶತ ಜನರು ಶೇ. 70 ಕ್ಕಿಂತ ಹೆಚ್ಚು ಇರುವ ಅಲ್ಪಸಂಖ್ಯಾತ, ಹಿಂದುಳಿದ, ದಲಿತ ವರ್ಗಗಳ ಮೇಲೆ ಅಧಿಕಾರ, ಹಕ್ಕು ಚಲಾಯಿಸುವುದು ದುರಂತದ ನೆಲ ನಮ್ಮದು ಎಂದು ಹೇಳಿದರು.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಪದಾಧಿಕಾರಿಗಳಾದ ಹರಿಹರದ ಮಾಜಿ ಶಾಸಕ ಎಸ್. ರಾಮಪ್ಪ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಹೊನ್ನಾಳಿಯ ಡಾ. ಈಶ್ವರನಾಯ್ಕ, ಬಿ. ಸಿದ್ಧಪ್ಪ, ಹೆಚ್.ಎ. ಉಮಾಪತಿ, ಜಗಳೂರಿನ ಕೆ.ಪಿ. ಪಾಲಯ್ಯ, ಇಬ್ರಾಹಿಂ ಖಲೀಲ್‌ವುಲ್ಲಾ, ಹೆಗ್ಗೆರೆ ರಂಗಪ್ಪ ಮಾತನಾಡಿದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ, ನಿವೃತ್ತ ಎಸ್ಪಿ ಎನ್. ರುದ್ರಮುನಿ, ವಕೀಲ ಎನ್. ಜಯದೇವನಾಯ್ಕ, ಶಿವಯೋಗಿ, ಬಿ.ಹೆಚ್. ಪರಶುರಾಮಪ್ಪ, ಮೀಸೆ ರಾಮಣ್ಣ, ಮಹೇಶ್, ಬಸವರಾಜ್, ಕೃಷ್ಣಾನಾಯಕ್, ಹರಪಹಳ್ಳಿ ಅಂಜಿನಪ್ಪ, ಕೆ. ಚಮನ್ ಸಾಬ್, ಹಾಲೇಶ್ ನಲ್ಕುಂದ, ರಂಜಿತ್, ವಾಸಪ್ಪ, ತಮ್ಮಣ್ಣ, ಬಿ. ಲಿಂಗರಾಜ್, ಅರವಿಂದ್ ಹಾಲೇಕಲ್, ಮನು, ದೀಪಕ್ ಜೋಗಪ್ಪನವರ್, ಅನಿಸ್ ಪಾಷ, ಮಂಜಪ್ಪ, ಶಿವಪ್ಪ, ಶಿವಾನಂದ ಬೇಲಿಮಲ್ಲೂರು, ಕುಂದೂರು ವಿನೋದ್, ಕುಂಕುವ ಅಶೋಕ್, ವಿನಯ್ ಎಂ. ವಗ್ಗರ್, ರಂಗನಾಥ್, ಶ್ರೀನಿವಾಸ್ ಚನ್ನಗಿರಿ, ಫುಟ್ಬಾಲ್ ಗಿರೀಶ್, ಬುಡಕಟ್ಟು ಜನಾಂಗದ ತಿಪ್ಪೇಶ್, ಹಕ್ಕಿಪಿಕ್ಕಿ ಜನಾಂಗದ ಹರೀಶ್, ಪುರಂದರ್ ಲೋಕಿಕೆರೆ, ಬಸವರಾಜ್ ಗುಬ್ಬಿ, ಮತ್ತಿತರರು ಭಾಗವಹಿಸಿದ್ದರು.

# ಕಾಂಗ್ರೆಸ್ ರಾಮ ಮಂದಿರ ನಿರ್ಮಾಣ ವಿರೋಧಿಸಿರಲಿಲ್ಲ : ದಿಗ್ವಿಜಯ್ ಸಿಂಗ್

ಭೂಪಾಲ್, ಜ. 16 – ಕಾಂಗ್ರೆಸ್ ಪಕ್ಷ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸುವುದನ್ನು ಎಂದೂ ವಿರೋಧಿಸಿರಲಿಲ್ಲ ಎಂದು ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ನ್ಯಾಯಾಲಯ ತನ್ನ ನಿರ್ಧಾರ ಪ್ರಕಟಿಸುವವರೆಗೂ ಕಾಯಬೇಕು ಎಂಬುದಷ್ಟೇ ಪಕ್ಷದ ನಿಲುವಾಗಿತ್ತು ಎಂದಿದ್ದಾರೆ.

ಕಾಂಗ್ರೆಸ್ ಮಾಜಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅವರು ವಿವಾದ ರಹಿತ ಜಾಗದಲ್ಲಿ ಮಂದಿರಕ್ಕಾಗಿ ಭೂಮಿ ಪೂಜೆ ನೆರವೇರಿಸಿದ್ದರು. ಮಾಜಿ ಪ್ರಧಾನ ಮಂತ್ರಿ ಪಿ.ವಿ. ನರಸಿಂಹ ರಾವ್ ಅವರು ರಾಮ ಮಂದಿರ ನಿರ್ಮಾಣಕ್ಕಾಗಿ ವಿವಾದ ರಹಿತ ಜಾಗವನ್ನು ವಶಕ್ಕೆ ತೆಗೆದುಕೊಂಡಿದ್ದರು ಎಂದು ಹೇಳಿದರು.

ಈ ಬಗ್ಗೆ ಕಟುವಾದ ಪ್ರತಿಕ್ರಿಯೆ ನೀಡಿರುವ ಮಧ್ಯಪ್ರದೇಶದ ಬಿಜೆಪಿ ವಕ್ತಾರ ಪಂಕಜ್ ಚತುರ್ವೇದಿ, ಸಿಂಗ್ ಅವರು ರಾಮ ದ್ರೋಹಿಯಾಗಿದ್ದಾರೆ. ಅವರು ಹಾಗೂ ಕಾಂಗ್ರೆಸ್ ಪಕ್ಷ ಸನಾತನ ಧರ್ಮ ವಿರೋಧಿಗಳು ಎಂದರು.

ರಾಮ ದೇವರು ಕಲ್ಪನಾತ್ಮಕ ಎಂದು ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣ ಪತ್ರ ದಾಖಲಿಸಿತ್ತು.

ಕಾಂಗ್ರೆಸ್ ಪಕ್ಷ ಎಷ್ಟು ಕಾಲ ಸನಾತನ ಧರ್ಮ ವಿರೋಧಿ ಹಾಗೂ ರಾಮದ್ರೋಹಿ ಆಗಿರಲಿದೆ ಎಂಬುದನ್ನು ತಿಳಿಸಬೇಕು ಎಂದು ಚತುರ್ವೇದಿ ಹೇಳಿದ್ದಾರೆ.

# ಆವಿಷ್ಕಾರ, ನಾವೀನ್ಯತೆ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜ.16- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರೊ. ಯು.ಆರ್. ರಾವ್ ಪುರಸ್ಕಾರ, ಪದವಿ ವಿದ್ಯಾರ್ಥಿಗಳಿಗೆ ಪ್ರೊ. ಎಸ್.ಕೆ.ಶಿವಕುಮಾರ್ ಪುರಸ್ಕಾರ ಹಾಗೂ ಜನಸಾಮಾನ್ಯರು ಮತ್ತು ಬೋಧಕರಿಗೆ ಕೆ.ಎಸ್.ಟಿ.ಎ. ಪುರಸ್ಕಾರಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ವೆಬ್‌ಸೈಟ್ www.kstacademy.in ನಲ್ಲಿ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 20 ಕೊನೆಯ ದಿನವಾಗಿರುತ್ತದೆ.


**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್ ಮಾರಾಟಕ್ಕೆ**
(ಕಮರ್ಷಿಯಲ್ ಆಗುವಂತಹ)
1) 40X60 ಉತ್ತರ 120 ಅಡಿ ರಸ್ತೆಗೆ
2) 40X40 ಪಶ್ಚಿಮ-ದಕ್ಷಿಣ ಕಾರ್ನರ್, 60 ಅಡಿ ರಸ್ತೆ.
ಕಿರಣ್ ಭೂಸ್ನೂರ್
97315 63409, 98440 63409

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, Rate - 2800/- 40x60 East, 40x60 South, 40x60 North, 30x50 West. 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು, ಮನೆ ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಗೀತಂ ಕಾಲೇಜ್ ಎದುರುಗಡೆ 30x50 North ಹೊಸ ಮನೆ, 20x48 West ಸೈಟು, 30x45, 30x45 East ಅಕ್ಕ-ಪಕ್ಕ, 30x50 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಆನ್‌ಲೈನ್ ಸೇವಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಲು ಒಬ್ಬ ನುರಿತ ಮಹಿಳಾ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.ಕನ್ನಡ, ಇಂಗ್ಲೀಷ್ ಟೈಪ್ ಮಾಡಲು ಬರಬೇಕು. ಸಂಬಳ 6800 ರಿಂದ 9 ಸಾವಿರದವರೆಗೆ. ಸಮಯ : ಬೆಳಿಗ್ಗೆ 9.30 ರಿಂದ 5.30ರವರೆಗೆ. ನಿಟುವಳ್ಳಿ, ದಾವಣಗೆರೆ.
94812 49660

**Property Doctor / ಪ್ರಾಪರ್ಟಿ ಡಾಕ್ಟರ್**
ಈ ಸೈಟ್ ತೊಗೋಬಹುದಾ? ದಾಖಲೆಗಳು ಏನು ಬೇಕು? ಕಾನೂನು ಪ್ರಕಾರ ಸರಿ ಇದೇನಾ? ಲೋನ್ ಸಿಗುತ್ತಾ? ಈ ರೇಟಿಗೆ ನನ್ನ ಸೈಟ್ ಮಾರಾಟ ಮಾಡಬಹುದಾ? ಈ ಎಲ್ಲ ಮಾಹಿತಿಯನ್ನು ನಿಮಗೆ ಕೇವಲ 100/- ನಲ್ಲಿ ಕೊಡಲಾಗುವುದು
96325 54524

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**ಸೈಟುಗಳು ಮಾರಾಟಕ್ಕಿವೆ**
1) 30x40 North ಸಿದ್ದವೀರಪ್ಪ ಬಡಾವಣೆಯಲ್ಲಿ 2) 30x40 West ವಿವೇಕಾನಂದ ಬಡಾವಣೆಯಲ್ಲಿ 3) 40x50 South ವಿನಾಯಕ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೇಕಾಗಿದ್ದಾರೆ**
* ಸೇಲ್ಸ್ ಎಕ್ಸಿಕ್ಯೂಟಿವ್
* ಆಫೀಸ್ ಬಾಯ್
ಸಂಪರ್ಕಿಸಿ : ಮನ್ವಿತ ಎಂಟರ್‌ಪ್ರೈಸಸ್
63620 23451, 97434 37003

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ. ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
97400 01117

**2 BHK FLAT FOR SALE**
1250 Sq. ft., 2 Balconies. 2nd Floor, Lift and Power-back Present.
Location : Shankuntala Park View, MCC 'B' Block, 7th Main, Davanagere.
CONTACT- WhatsApp only to
+91- 9742521922

**ಕೆಲಸಕ್ಕೆ ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್, ಕರೂರ್ ಇಂಡಸ್ಟ್ರೀಯಲ್ ಏರಿಯಾ , ದಾವಣಗೆರೆ, ಹುಡುಗರು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
99018 69371
91481 88927

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ, ದಂಪತಿ ಬೇಕಾಗಿದ್ದಾರೆ. ಸಂಬಳ 20,000/- ಊಟ+ವಸತಿ ಉಚಿತ.
97400 98047

**ಮಾರಾಟಕ್ಕಿವೆ**
ಸಿದ್ದೇಶ್ವರ ಹೋಟೆಲ್‌ನ ಸಾಮಾನುಗಳು ಮಾರಾಟಕ್ಕಿವೆ
ಆಸಕ್ತರು ಸಂಪರ್ಕಿಸಿ : ನೂತನ ಕಾಲೇಜ್ ಹತ್ತಿರ, ಎಲ್.ಐ.ಸಿ. ಕಾಲೋನಿ
95917 25223, 63615 90324

**WANTED**
OM DENTAL CARE
Ram & Co Circle, Davangere.
1) BDS Dentist
2) Staff
(Full time & Part Time)
90669 93738

**ಡ್ರೈವರ್ ಬೇಕಾಗಿದ್ದಾರೆ**
ಸ್ಕೂಲ್ ವ್ಯಾನ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
95356 10817
88920 07561

**ಶ್ರೀ ಸಾಯಿ ಕ್ಯಾಟರಿಂಗ್**
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಅಡುಗೆ ಮಾಡಿ ಕೊಡಲಾಗುವುದು.
ಸಂಪರ್ಕಿಸಿ :
94489 24273

**ಬೇಕಾಗಿದ್ದಾರೆ**
ಆಡಿಟರ್ ಆಫೀಸ್‌ನಲ್ಲಿ ಕೆಲಸ ಮಾಡಲು ಆಫೀಸ್ ಬಾಯ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಬಿ.ಜಿ. ಬಸವರಾಜಪ್ಪ
SJJM ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ. ಸಮಯ : 1 ರಿಂದ 5ರ ವರೆಗೆ
99001 42052

**ಸೈಟು ಮಾರಾಟಕ್ಕಿದೆ**
30x59 ದಕ್ಷಿಣ ಸೈಟು ಮಾರಾಟಕ್ಕಿದೆ (ಕಾರ್ನರ್ ಸೈಟಿನ ಪಕ್ಕ) ಹರಿಹರದ KHB ಲೇಔಟ್, ಅಮರಾವತಿ ಕಾಲೋನಿ. ಸಂಪರ್ಕಿಸಿ :
99802 00664, 94495 81264

**24X7 CAR TAXI**
ಕಾರ್ ಬಾಡಿಗೆಗೆ
ಸಂಪರ್ಕಿಸಿ :
86609 98651
97436 54365

**HOUSE TO-LET 2BHK**
Newly Built Fully Furnished.
# 3542/90A , Mallikarjuna Nivasa, 7th Main, 6th Cross, Ground floor, Near Kannika Parameswari Temple, Balaji Nagara, Davangere-577004.
99015 18222,87227 86227

**WANTED**
R.V. Transformer's mfg. co.
Lokikere Road, Industrial Area, Davangere-577 005.
Work's : Basic Computer Works
(Only for boy's)
79758 93133

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.


**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಬೇಕಾಗಿದ್ದಾರೆ**
ಮಗುವಿನ ಆರೈಕೆ ಮಾಡುವ ಕೆಲಸಕ್ಕೆ ಸ್ತ್ರೀಯರು ಬೇಕಾಗಿದ್ದಾರೆ
ಸಂಪರ್ಕಿಸಿ :
91642 56425
86609 98651

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಗವರ್ನಮೆಂಟ್ ಜಾಬ್ ಸಂಪರ್ಕಿಸಿ**
ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ ಯುವತಿಯರ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ :
80733 42011

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಸಂಬಳ : 8000-11000
96329 03973
97311 55583

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು
ಸಂಪರ್ಕಿಸಿ :
86609 98651
97436 54365

**ಕೇವಲ 3 ದಿನ ಮಾತ್ರ**
ಸೋಫಾ, ಫರ್ನೀಚರ್ ಹಾಗೂ ಕುಷನ್, ಸ್ಪಾಂಜ್ ಬೆಡ್ ಸಿಗುತ್ತವೆ.
ಶೇ. 25 ರಿಯಾಯಿತಿ
88614 38237

**ಬೆಂಗಳೂರಿನಲ್ಲಿ ಕುಕ್ ಬೇಕಾಗಿದ್ದಾರೆ**
ವೆಜ್, ನಾನ್‌ವೆಜ್ ಗೊತ್ತಿರಬೇಕು 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. ಸಂಬಳ : 15,000/- ಊಟ ರೂಂ, ಉಚಿತ
97400 98047

**ಬೇಕಾಗಿದ್ದಾರೆ**
ಸಹಾಯಕರು, ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಪಾರ್ಟ್‌ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
79751 07268

**ಹುಡುಗರು ಬೇಕಾಗಿದ್ದಾರೆ**
Xerox ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
Famous Astrologer
No. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ಧ.
ಜಿ. ವೀರೇಶ್‌ರಾವ್ ಶಾಸ್ತ್ರಿ
ಮನೆ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WARE HOUSE / GOWDON FOR RENT**
KIADB Industrial area, Lokikere road, Plot - 29, Dvg. Area 8800 spft 30 feet roof hight, For Rent. Contact :
94482 75019, 94489 80263

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿ.ಯು.ಸಿ.ಮತ್ತು ಡಿಗ್ರಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೆ. ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
# 43H, ಎಸ್.ಜೆ.ಜೆ.ಎಮ್. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗ.
72045 77823

**ಸುಸಜ್ಜಿತವಾದ ಕ್ಲಿನಿಕ್ ಬಾಡಿಗೆಗಿದೆ**
ಸ್ವಾಗೇರ್‌ಪೇಟೆ ಕಾಯಿಪೇಟೆ, ಬಸವೇಶ್ವರ ದೇವಸ್ಥಾನ, ಹಳೆ ದಾವಣಗೆರೆ ಹತ್ತಿರ, 2 ಕೊಠಡಿ (ಕ್ಯಾಬಿನ್) ವುಳ್ಳ ಮಳಿಗೆ ಕ್ಲಿನಿಕ್/ಆಫೀಸ್ ಕೊಡುವುದಿದೆ ಅಥವಾ ಕ್ಲಿನಿಕ್‌ನ ಎಲ್ಲಾ ಸಾಮಗ್ರಿಗಳು ಮಾರಾಟಕ್ಕಿವೆ.
98867 06400

# ಭಾನುವಳ್ಳಿ: ಪ್ರತಿಮೆ ತೆರವುಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ, ಸೂಕ್ತ ಸ್ಪಂದನೆ



ಮಲೇಬೆನ್ನೂರು, ಜ. 16- ಭಾನುವಳ್ಳಿ ಗ್ರಾಮದಲ್ಲಿ ಮದಕರಿ ನಾಯಕ ಮಹಾದ್ವಾರದ ಪಕ್ಕದಲ್ಲೇ ಅನಧಿಕೃತವಾಗಿ ಪ್ರತಿಷ್ಠಾಪಿಸಿರುವ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ತೆರವುಗೊಳಿಸುವಂತೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಅವರ ನೇತೃತ್ವದಲ್ಲಿ ಭಾನುವಳ್ಳಿಯ ಗ್ರಾಮಸ್ಥರು ಮಂಗಳವಾರ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಗ್ರಾಮದಲ್ಲಿ ಸಾಮರಸ್ಯ ಹದಗೆಡದಂತೆ ಕೂಡಲೇ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಭರವಸೆ ನೀಡಿದರು. ಈ ವೇಳೆ ಹಾಜರಿದ್ದ ಮಹಿಳೆಯರೂ ಕೂಡ ನಮ್ಮ ಬಗ್ಗೆ ಅಸಭ್ಯವಾಗಿ ಮಾತನಾಡುತ್ತಿದ್ದಾರೆ. ಅಂತಹ ವ್ಯಕ್ತಿಗಳ ಮೇಲೆ ಕ್ರಮಕೈಗೊಳ್ಳಿ ಎಂದು ಡಿಸಿಗೆ ಮನವಿ ಮಾಡಿದರು.

ಅಪರ ಜಿಲ್ಲಾಧಿಕಾರಿ ಲೋಕೇಶ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್, ವಕೀಲ ಎನ್.ಎಂ. ಆಂಜನೇಯ ಗುರೂಜಿ, ಶ್ಯಾಗಲೆ ಮಂಜುನಾಥ್, ನಗರಸಭೆ ಸದಸ್ಯ ದಿನೇಶ್ ಬಾಬು ಶ್ರೀಮತಿ ಪಾರ್ವತಿ ಬೋರಯ್ಯ, ಶ್ರೀಮತಿ ವಿಜಯಶ್ರೀ ಮಹೇಂದ್ರ ಕುಮಾರ್, ಮಕರಿ ಪಾಲಾಕ್ಷಪ್ಪ, ಕೊಕ್ಕ ನೂರು ಸೋಮಶೇಖರ್, ದೇವರಬೆಳಕೆರೆ ಮಹೇಶ್ವರಪ್ಪ, ತಿಮ್ಮೇನಹಳ್ಳಿ ರಾಜಪ್ಪ, ಭಾನುವಳ್ಳಿಯ ಟಿ.ಪುಟ್ಟಪ್ಪ, ಸಿದ್ಧಪ್ಪ ದೊಡ್ಡಮನಿ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಜಿಗಳಿ ರಂಗನಾಥ್‌ಗೆ ಕನಕಶ್ರೀ ಚೇತನ ಪತಂಜಲಿ ಪ್ರಶಸ್ತಿ



ಮಲೇಬೆನ್ನೂರು, ಜ.16- ಪತಂಜಲಿ ಯೋಗ ಮತ್ತು ಪ್ರಕೃತಿ ಸಂಸ್ಥೆಯು ತನ್ನ 26 ನೇ ವರ್ಷದ ಶುಭ ಸಂದರ್ಭದಲ್ಲಿ ಮತ್ತು 536ನೇ ಶ್ರೀ ಕನಕದಾಸರ ಜಯಂತಿಯ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ, ಕೊಡಮಾಡುವ ರಾಜ್ಯ ಮಟ್ಟದ 'ಕನಕಶ್ರೀ ಚೇತನ ಪತಂಜಲಿ ರತ್ನ' ಪ್ರಶಸ್ತಿಗೆ ಬೀದಿ ನಾಟಕ ಕಲಾವಿದ ಜಿಗಳಿಯ ಡಿ.ರಂಗನಾಥ್ ಆಯ್ಕೆಯಾಗಿದ್ದಾರೆ.

ಶಿವಮೊಗ್ಗ ನಗರದ ಪತಂಜಲಿ ಯೋಗ ಮಂದಿರದಲ್ಲಿ ಫೆ.4 ರಂದು ಈ ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದು ಪತಂಜಲಿ ಯೋಗ ಮತ್ತು ಪ್ರಕೃತಿ ಸಂಸ್ಥೆಯ ಅಧ್ಯಕ್ಷರಾದ ಎ.ಹೆಚ್.ಶ್ಯಾಮಲಾ ತಿಳಿಸಿದ್ದಾರೆ.

# ಸಂಚಾರ ವ್ಯವಸ್ಥೆ ಸುಧಾರಣೆಗೆ ಆಧುನಿಕ ತಂತ್ರಜ್ಞಾನ ಬಳಕೆ

## ಸ್ಮಾರ್ಟ್ ಸಿಟಿ ಮತ್ತು ಪೊಲೀಸ್ ಇಲಾಖೆ ಸಹಯೋಗದ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ಎಸ್ಪಿ ಉಮಾ ಪ್ರಶಾಂತ್






ದಾವಣಗೆರೆ, ಜ.16- ರಸ್ತೆ ಸುರಕ್ಷಾ ಸಪ್ತಾಹದ ಅಂಗವಾಗಿ ನಗರದ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ಸ್ಮಾರ್ಟ್ ಸಿಟಿ ಕಮಾಂಡ್ ಸೆಂಟರ್‌ನಲ್ಲಿ ಅಡ್ವಾನ್ಸ್ಡ್ ಟ್ರಾಫಿಕ್ ಮ್ಯಾನೇಜ್ ಮೆಂಟ್ ಹಾಗೂ ರಸ್ತೆ ಸುರಕ್ಷತೆಯ ಕಾರ್ಯನಿರ್ವಹಣೆ ಬಗ್ಗೆ ತಿಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸ್ಮಾರ್ಟ್‌ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ವೀರೇಶ್ ಕುಮಾರ್ ಹಾಗೂ ಉಪ ವ್ಯವಸ್ಥಾಪಕರಾದ ಶ್ರೀಮತಿ ಮಮತಾ ಸ್ಮಾರ್ಟ್ ಸಿಟಿ ಮತ್ತು ಪೊಲೀಸ್ ಇಲಾಖೆ ಸಹಯೋಗದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ನಗರದ ಸಂಚಾರ ವ್ಯವಸ್ಥೆ ಸುಧಾರಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅವರು ತಿಳಿಸಿದರು.

ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಬಳಕೆ, ಅತ್ಯಾಧುನಿಕ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ.

ನಗರದ 23 ವೃತ್ತಗಳಲ್ಲಿ ಅಡಾಪ್ಟಿವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ ಅಳವಡಿಸಲಾಗಿದೆ. ವಾಹನ ದಟ್ಟಣೆಗೆ ತಕ್ಕಂತೆ ಸಿಗ್ನಲ್‌ಗಳಲ್ಲಿ ಸಮಯ ನಿಗದಿ ಮಾಡಲಾಗಿದೆ. ಇದರ ಪರಿಣಾಮವಾಗಿ ಸಮಯ ಮತ್ತು ಇಂಧನದ ಉಳಿತಾಯವಾಗುತ್ತಿದೆ. ಹಳೇ ಪಿಬಿ ರಸ್ತೆಯಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಈರುಳ್ಳಿ ಮಾರುಕಟ್ಟೆವರೆಗೆ 7 ಪ್ರಮುಖ ವೃತ್ತಗಳನ್ನು ದಾಟಿ ಹೋಗಲು ಈ ಮೊದಲು 14.46 ನಿಮಿಷ ಬೇಕಿತ್ತು. ಈಗ ಕೇವಲ 8.6 ನಿಮಿಷಗಳಲ್ಲಿ ಆ ಅಂತರವನ್ನು ಕ್ರಮಿಸಬಹುದಾಗಿರುತ್ತದೆ.

ಸಿಟಿ ಸರ್ವೆಲೆನ್ಸ್ ಅಡಿಯಲ್ಲಿ ನಗರದ 111 ಕಡೆಗಳಲ್ಲಿ 215 ಕ್ಯಾಮೆರಾ ಅಳವಡಿಸಲಾಗಿದೆ. ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್ ಮೆಂಟ್ ಸಿಸ್ಟಮ್ ಅಡಿಯಲ್ಲಿ 11 ಕಡೆಗಳಲ್ಲಿ 45 ಕ್ಯಾಮೆರಾ ಅಳವಡಿಸಲಾಗಿದೆ. ಈ ವ್ಯವಸ್ಥೆಯಿಂದ ಹಲವು ಪೊಲೀಸ್ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅನುಕೂಲ ವಾಗಿದೆ. ಮಾರ್ಚ್‌ನಿಂದ ಇಲ್ಲಿಯವರೆಗೆ 140 ಪ್ರಕರಣಗಳ ಪೈಕಿ 123 ಕೇಸ್‌ಗಳು ಬಗೆಹರಿದಿವೆ.

ಸ್ಮಾರ್ಟ್‌ಸಿಟಿ ಐಸಿಟಿ ಪ್ರಾಜೆಕ್ಟ್‌ನಿಂದ ನಗರದಲ್ಲಿ ಅಪರಾಧ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ತುಂಬಾ ಪರಿಣಾಮ ಬೀರಿದೆ. ಒಟ್ಟು 123 ಪ್ರಕರಣಗಳ ಪೈಕಿ 250 ಗ್ರಾಂ ಚಿನ್ನ, 48 ಕೆಜಿ ಬೆಳ್ಳಿ, 72 ಬೈಕ್ ವಶಪಡಿಸಿಕೊಳ್ಳಲಾಗಿದೆ.

1 ಕೊಲೆ ಪ್ರಕರಣ, 22 ಅಪಘಾತ ಪ್ರಕರಣ, ನಕಲಿ ನಂಬರ್ ಪ್ಲೇಟ್‌ನ 7 ಕೇಸ್ ಪತ್ತೆಯಲ್ಲಿ ಸಹಾಯಕವಾಗಿದೆ.

ನಗರ ಮತ್ತು ಜಿಲ್ಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಹಾಗೂ ಟ್ರಾಫಿಕ್ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಇಲಾಖೆಗೆ ನೇರವಾಗಿ ದೂರು ಸಲ್ಲಿಸಲು ಮೊಬೈಲ್ ಸಂಖ್ಯೆ: 9480803208 ವ್ಯವಸ್ಥೆ ಮಾಡಲಾಗಿರುತ್ತದೆ. ಈ ಮೊಬೈಲ್ ನಂಬರ್‌ಗೆ ಸಾರ್ವಜನಿಕರು ಕಣ್ಣಿಗೆ ಬೀಳುವ/ಗಮನಕ್ಕೆ ಬರುವ ಸಂಚಾರ ನಿಯಮ ಉಲ್ಲಂಘನೆ ಹಾಗೂ ಟ್ರಾಫಿಕ್ ಸಮಸ್ಯೆಗಳ ಬಗ್ಗೆ ಸದರಿ ನಂಬರ್‌ಗೆ ವಾಟ್ಸಾಪ್ ಮೂಲಕ ತಿಳಿಸಬಹುದಾಗಿರುತ್ತದೆ.

**ಇ-ಚಲನ್ ವ್ಯವಸ್ಥೆ ಜಾರಿ:** ನಗರದಲ್ಲಿ ಸಂಚಾರ ನಿಯಮಗಳ ಉಲ್ಲಂಘನೆಗೆ ದಂಡ ಪಾವತಿಸಲು ಇ-ಚಲನ್ ವ್ಯವಸ್ಥೆ ಜಾರಿಗೆ ತರಲಾಗಿರುತ್ತದೆ.

**ಸುರಕ್ಷಾ ಆ್ಯಪ್:** ಮಹಿಳಾ ಸುರಕ್ಷತೆಗಾಗಿ ದಾವಣಗೆರೆ 'ಸುರಕ್ಷಾ' ಆ್ಯಪ್ ಬಿಡುಗಡೆ ಮಾಡಲಾಗಿದೆ. ಈ ಆಪ್ ಮೂಲಕ ಹೆಣ್ಣುಮಕ್ಕಳು ತುರ್ತು ಪರಿಸ್ಥಿತಿಯಲ್ಲಿ ನೆರವು ಪಡೆಯಬಹುದಾಗಿ ರುತ್ತದೆ. ಹಾಗೆಯೇ ಇಂಟೆಲಿಜೆಂಟ್ ಟ್ರಾನ್ಸ್ ಪೋರ್ಟ್ ಸಿಸ್ಟಮ್‌ನ್ನು, ವೇರಿಯೇಬಲ್ ಮೆಸೇಜ್ ಸೈನ್ ಬೋರ್ಡ್‌ಗಳನ್ನು ಅಳವಡಿಸಲಾಗಿರುತ್ತದೆ ಎಂದು ಅವರು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಿ. ಮಂಜುನಾಥ, ನಗರ ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ, ಡಿವೈಎಸ್ಪಿ ಯಶವಂತ್, ಪೊಲೀಸ್ ನಿರೀಕ್ಷಕರಾದ ನಲವಾಗಲು ಮಂಜುನಾಥ, ಮಲ್ಲಮ್ಮ ಚೌಬೆ, ಇಮ್ರಾನ್ ಬೇಗ್ ಹಾಗೂ ಪಿಎಸ್‌ಐ ಶ್ರೀಮತಿ ಶೈಲಜಾ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಬಿಇಎ ಶಾಲೆಯಲ್ಲಿ ವಾರ್ಷಿಕೋತ್ಸವ




ದಾವಣಗೆರೆ, ಜ. 16 - ನಗರದ ಪಿ.ಜೆ. ಬಡಾವಣೆಯಲ್ಲಿನ ಬಿಇಎ ನರ್ಸರಿ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವು ನಡೆಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ ಅವರು ಮಕ್ಕಳ ಶಿಕ್ಷಣದ ಮಹತ್ವ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತರಳಬಾಳು ವಿದ್ಯಾಸಂಸ್ಥೆ, ಸಿರಿಗೆರೆಯ ನಿವೃತ್ತ ಪ್ರಾಚಾರ್ಯರಾದ ಡಾ. ನಾ.ಲೋಕೇಶ್ ಒಡೆಯರ್ ವಿಶೇಷವಾಗಿ ಸ್ವಾಮಿ ವಿವೇಕಾನಂದರ ಜಯಂತ್ಯೋತ್ಸವವನ್ನು ಸ್ಮರಿಸಿ ವಿದ್ಯಾರ್ಥಿಗಳು ಅವರ ಧ್ಯೇಯಗಳನ್ನು ಅಳವಡಿಸಿಕೊಳ್ಳಲು ಕರೆ ನೀಡಿದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿ ಬಾಪೂಜಿ ವಿದ್ಯಾಸಂಸ್ಥೆಯ ಖಜಾಂಚಿಗಳಾದ ಎ.ಎಸ್.ನಿರಂಜನ್ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುಂಚೂಣಿಯಲ್ಲಿದ್ದು ಸಮಾಜ ಸೇವೆಯಲ್ಲಿ ತೊಡಗಿಕೊಳ್ಳಲು ಸಲಹೆ ನೀಡಿದರು. ಶಾಲೆಯ ಮುಖ್ಯೋಪಾಧ್ಯಾಯ ರವಿ.ಜಿ.ಎಸ್ ಉಪಸ್ಥಿತರಿದ್ದರು.

# ಲಾರಿ ಮಾಲೀಕರ ಹೋರಾಟಕ್ಕೆ ಬೆಂಬಲ ಇಲ್ಲ

ದಾವಣಗೆರೆ, ಜ.17- ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಸ್ತಾಪಿಸಿರುವ ಐಪಿಸಿ 106 ಕ್ಲಾಸ್ 2 ವಾಹನ ಕಾಯ್ದೆ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿ ನಾಳೆ ಬುಧವಾರ ನಡೆಸುವ ಹೋರಾಟವನ್ನು ಬೆಂಬಲಿಸುವುದಿಲ್ಲ ಎಂದು ಜಿಲ್ಲಾ ಲಾರಿ ಮಾಲೀಕರು ಮತ್ತು ಟ್ರಾನ್ಸ್ ಪೋರ್ಟ್ ಏಜೆಂಟರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಕೇಂದ್ರ ಗೃಹ ಸಚಿವಾಲಯವು ಐಪಿಸಿ ಸೆಕ್ಷನ್ 304ಎ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಅತಿ ವೇಗ ಹಾಗೂ ಅಜಾಗರೂಕತೆಗೆ ಕಾನೂನಿನಲ್ಲಿ ಪರಿವರ್ತನೆ ಮಾಡಿ 7 ಲಕ್ಷ ರೂ. ದಂಡ ಹಾಗೂ 10 ವರ್ಷ ಜೈಲು ಶಿಕ್ಷೆ (ಜಾಮೀನು ರಹಿತ) ಮಾಡಿರುವುದು ಖಂಡನೀಯ.

ಈ ನೂತನ ಕಾನೂನು ಎಲ್ಲಾ ವಾಹನ ಚಾಲಕರಿಗೂ ಮಾರಕವಾಗಿದ್ದು, ಇದರ ಗಂಭೀರತೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಎಐಎಂಟಿಸಿ ಮೂಲಕ ಮನವರಿಕೆ ಮಾಡಿಕೊಡಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ನಮ್ಮ ಸಂಘಟನೆಯನ್ನು ಸಂಪರ್ಕಿಸಿ ಕೇಂದ್ರ ಸಚಿವ ಪಿಯೂಶ್ ಗೋಯಲ್ ಅವರಿಗೆ ವಿವರಣೆ ಪಡೆಯಲು ಸೂಚಿಸಿದ್ದರು. ನಂತರ ಗೃಹ ಕಾರ್ಯದರ್ಶಿ ಅಜಯ್ ಬಲ್ಲಾ ಅವರು ನಮ್ಮ ಸಂಘಟನೆಯೊಂದಿಗೆ ಚರ್ಚಿಸಿ ಮಾರ್ಪಡಿಸಲಾಗಿರುವ ಕಾನೂನನ್ನು ಜಾರಿಗೊಳಿಸುವುದಿಲ್ಲ ಎಂದು ಲಿಖಿತವಾಗಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಕಾನೂನು ಬದಲಿಸಿರುವುದನ್ನು ಖಂಡಿಸಿ ಇದೇ 17ರಂದು ಫೆಡರೇಷನ್ ಆಫ್ ಕರ್ನಾಟಕ ಲಾರಿ ಮಾಲೀಕರ ಅಸೋಸಿಯೇಷನ್ ಕರೆ ಕೊಟ್ಟಿರುವ ಮುಷ್ಕರದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದವರು ಸ್ಪಷ್ಟಪಡಿಸಿದರು.

ಈ ಕಾನೂನು ಪಾರ್ಲಿಮೆಂಟ್‌ನಿಂದ ರಾಜ್ಯ ಸಭಾ ಹಾಗೂ ರಾಷ್ಟ್ರಪತಿಗಳ ಒಪ್ಪಿಗೆ ಕೊಟ್ಟ ನಂತರ ಮುಂದಿನ ಅಧಿವೇಶನದಲ್ಲಿ ಚರ್ಚಿಸಿ ಹಿಂಪಡೆಯುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಸ್.ಕೆ. ಮಲ್ಲಿಕಾರ್ಜುನ್, ವಿಜಯಕುಮಾರ್, ಮಹಾಂತೇಶ್ ಒಣರೊಟ್ಟಿ, ಎಂ.ದಾದಾಪೀರ್, ಶ್ರೀಧರ್ ಬಾತಿ, ಭೀಮಣ್ಣ, ಫಯಾಜ್ ಅಹ್ಮದ್, ರಫೀಕ್, ಸರ್ದಾರ್ ಅಲಿಖಾನ್ ಉಪಸ್ಥಿತರಿದ್ದರು.

# ಲಿಂ.ಶಿರಸಂಗಿ ಲಿಂಗರಾಜ ದೇಸಾಯಿ ಜಯಂತಿ ಆಚರಣೆ



ದಾವಣಗೆರೆ, ಜ.10- ರಾಜ್ಯವನ್ನು ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳಗಿಸಿದ ಲಿಂಗೈಕ್ಯ ಶಿರಸಂಗಿ ಲಿಂಗರಾಜ ದೇಸಾಯಿ ಅವರ ಜಯಂತಿಯನ್ನು ವೀರಶೈವ-ಲಿಂಗಾಯತ ಮಹಾಸಭಾ ವತಿಯಿಂದ ಬುಧವಾರ ಆಚರಿಸಲಾಯಿತು.

ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರೂ, ಶಾಸಕರೂ ಆದ ಡಾ. ಶಾಮನೂರು ಶಿವಶಂಕರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶಿರಸಂಗಿ ಲಿಂಗರಾಜ ದೇಸಾಯಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮಹಾಸಭೆಯ ಪ್ರಥಮ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ, ನಾಡಿಗೆ ಅವರು ಕೊಟ್ಟಿರುವ ಕೊಡುಗೆಗಳನ್ನು ಸ್ಮರಿಸಲಾಯಿತು.

ಮಹಾಸಭೆಯ ಉಪಾಧ್ಯಕ್ಷರುಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಶಾಮನೂರು ಗಣೇಶ, ಕಾರ್ಯದರ್ಶಿಗಳಾದ ಹೆಚ್. ಎಂ.ರೇಣುಕಪ್ರಸನ್ನ, ಜಿಲ್ಲಾ ಘಟಕದ ಅಧ್ಯಕ್ಷರಾದ ದೇವರಮನಿ ಶಿವಕುಮಾರ್ ಹಾಗೂ ಜಿಲ್ಲಾ ಘಟಕ, ಮಹಿಳಾ ಮತ್ತು ಯುವ ವಿಭಾಗಗಳ ಪದಾಧಿಕಾರಿಗಳು ಹಾಜರಿದ್ದರು.

## ಓದುಗರ ಪತ್ರ

# ಕಡ್ಡಾಯ ಮತದಾನದ ಕಾನೂನು ಜಾರಿಯಾಗಬೇಕು

ಮಾನ್ಯರೇ,

ಇತ್ತೀಚಿನ ದಿನಗಳಲ್ಲಿ ಚುನಾವಣೆ ಬಂತೆಂದರೆ ಶೇಕಡವಾರು ಮತದಾನ ಕಡಿಮೆಯಾಗಿದೆ ಎಂಬುದು ಚರ್ಚಿತ ವಿಚಾರ. ಲೋಕಸಭೆ, ವಿಧಾನಸಭೆ, ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸೇರಿದಂತೆ ಯಾವುದೇ ಚುನಾವಣೆಗಳು ನಡೆದರೂ ಮತದಾನ ಪ್ರಮಾಣ ಹೆಚ್ಚಾಗಬೇಕು. ಮತದಾನ ಮಾಡದವರಿಗೆ ಶಿಕ್ಷೆ ವಿಧಿಸುವಂತಹ ಕಾನೂನು ಜಾರಿಯಾಗಬೇಕು. ಮತದಾನ ಕಡ್ಡಾಯಗೊಳಿಸುವುದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸ ಬೇಕಿದೆ. ಹಾಗಾಗಿ, ಕೆಲವು ಸಲಹೆಗಳು ಇಲ್ಲಿವೆ. ಇವು ಜಾರಿಯಾದರೆ ಮತದಾನ ಪ್ರಮಾಣ ಹೆಚ್ಚಾಗುವುದು ಖಚಿತ.

ಸರ್ಕಾರಿ ಸೌಲಭ್ಯ ಪಡೆಯಲು ಮತದಾನ ಕಡ್ಡಾಯ. ಕನಿಷ್ಠ ವಿದ್ಯಾರ್ಹತೆ. ಆಧಾರ್ ಕಾರ್ಡ್‌ನಂತೆಯೇ ಮತದಾನದ ಸ್ವೀಕೃತಿ, ಕೆವೈಸಿ ಕಡ್ಡಾಯವಾಗಿ ಕಟ್ಟುನಿಟ್ಟಾಗಬೇಕು.

ಸಾಮಾನ್ಯ ಮನುಷ್ಯನನ್ನು ಆಯ್ಕೆ ಮಾಡಲು ಸಮಾಜಕ್ಕೆ ಒಂದು ಅವಕಾಶ ಹಾಗೂ ಬಂಡವಾಳ ಶಾಹಿಗಳನ್ನು ಬಗ್ಗುಬಡಿಯುವ ಪ್ರಯತ್ನ. ಶೇಕಡವಾರು ಮತದಾನ ಹೆಚ್ಚಿಸಬಹುದು. ಅದರಿಂದ ಮತದಾನ ಓಲೈಕೆ ಪಿಡುಗು ತಪ್ಪಿಸಬಹುದು.

ಮತದಾನ ಮಾಡಿದ ಸ್ವೀಕೃತಿ ಪತ್ರ ಎಲ್ಲಾ ಸೌಲಭ್ಯ ಪಡೆಯಲು ಮಾನದಂಡವಾಗಬೇಕು. ಅದು ನಾಗರಿಕನ ಬದ್ಧತೆಯಾಗಬೇಕು. ಮತದಾನ ಮಾಡಲು ಅವಶ್ಯಕವಿರುವ ಮತದಾನದ ಗುರುತಿನ ಚೀಟಿಯನ್ನು ಸರ್ಕಾರದ ಕನಿಷ್ಠ ವಯೋಮಿತಿಗೆ ತಲುಪಿದ ವ್ಯಕ್ತಿಯೂ ಕಡ್ಡಾಯವಾಗಿ ಚುನಾವಣಾಧಿಕಾರಿಗಳ ಕಚೇರಿಗೆ ವೈಯಕ್ತಿಕವಾಗಿ ಹೋಗಿ ಪಡೆಯತಕ್ಕದ್ದು. ಇಲ್ಲವಾದಲ್ಲಿ ವಾರ್ಷಿಕವಾಗಿ ದಂಡ ಪಾವತಿಸಿದರೆ ಮಾತ್ರ ಚೀಟಿ ಪಡೆಯಲು ಅರ್ಹ.

ಮತದಾನದ ವೇಳೆಯನ್ನು ಹೆಚ್ಚಿಸಬೇಕು. ಮತದಾನ ಮಾಡಿದ ಸ್ವೀಕೃತಿ ಆ ಕ್ಷೇತ್ರದ ಇನ್ನೊಂದು ಯಾವುದೇ ಚುನಾವಣೆಯ ತನಕ ಮಾತ್ರ ಮಾನ್ಯತೆ ಇರಬೇಕು. ಚಾಲನಾ ಪರವಾನಗಿ ಪಡೆಯಲು ವಿದ್ಯಾರ್ಹತೆ ನಿಗದಿಪಡಿಸಿರುವಂತೆ ಸೌಲಭ್ಯ ಪಡೆಯಲು ನಿಗದಿಪಡಿಸಬೇಕು.

ಸೌಲಭ್ಯಗಳನ್ನು ಪಡೆಯಲು ಮೀಸಲಾತಿ ಮಾನದಂಡವನ್ನೇ ಅಳವಡಿಸಬೇಕು. ಸಾಮಾನ್ಯ ಎನ್ನುವ ಕೆಟಗರಿಯನ್ನು ಸಂಪೂರ್ಣ ರದ್ದುಪಡಿಸಬೇಕು. ಅವರವರ ಕೆಟಗರಿಗಳಡಿಯಲ್ಲಿ ಸೌಲಭ್ಯ ಪಡೆಯುವಂತಾಗಬೇಕು.

ಯಾವುದಾದರೂ ಅನಿವಾರ್ಯ ಕಾರಣಕ್ಕೆ ಮತದಾನ ಮಾಡಲು ಆಗದಿದ್ದ ಪಕ್ಷದಲ್ಲಿ ಕೋರ್ಟ್‌ನ ಮೂಲಕ ಅರ್ಹತೆ ಪಡೆಯಬೇಕು ಮತ್ತು ಅದನ್ನು ಜೀವಿತಾವಧಿಯಲ್ಲಿ ಮೂರು ಬಾರಿ ಮಾತ್ರ ಅವಕಾಶ ಕೊಡಬೇಕು.

ವಿದ್ಯಾವಂತರು ಮತದಾನದ ದಿನ ಹೊರಗೆ ಹೋಗುತ್ತಾರೆ. ಅವರೂ ಮತದಾನದಿಂದ ವಂಚಿತರಾಗಬಾರದು. ಅಲ್ಲದೇ ಅವರು ನಿರ್ಲಕ್ಷ್ಯ ವಹಿಸಿದ್ದು, ಸಾಬೀತಾದರೆ ದಂಡದ ಜೊತೆಗೆ ಸೌಲಭ್ಯ ಕಡಿತಗೊಳಿಸಬೇಕು.

ಈ ಎಲ್ಲಾ ಅಂಶಗಳು ಜಾರಿಯಾದರೆ ಮತದಾನ ಹೆಚ್ಚಳವಾಗುವುದರಲ್ಲಿ ಸಂಶಯವಿಲ್ಲ. ಕೇಂದ್ರ ಚುನಾವಣಾ ಆಯೋಗವು ಇದನ್ನು ಗಂಭೀರವಾಗಿ ಪರಿಗಣಿಸಿ, ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂದು ವಿನಯವಾಗಿ ಪ್ರಾರ್ಥಿಸುತ್ತೇನೆ.



**ನಾಗಭೂಷಣ್ ವಾಣಿ,**
ಕೆ. ಬಿ. ಬಡಾವಣೆ, ದಾವಣಗೆರೆ,
ಮೊ. 78994 59295

# ಮಕ್ಕಳಲ್ಲಿ ಕಲಿಕೆ ಗುಣಮಟ್ಟ ಹೆಚ್ಚಲು ವಸ್ತು ಪ್ರದರ್ಶನಗಳು ಸಹಕಾರಿ

## ಶ್ರೀ ಸೋಮೇಶ್ವರ ವಿದ್ಯಾಲಯದ ಕಾರ್ಯಕ್ರಮದಲ್ಲಿ ವಿಜ್ಞಾನ ವಿಭಾಗದ ಪರಿವೀಕ್ಷಕರಾದ ವಸಂತ ಕುಮಾರಿ




ದಾವಣಗೆರೆ, ಜ.16- ಶಾಲಾ ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನಗಳು ಮಕ್ಕಳಲ್ಲಿ ಕಲಿಕೆಯ ಗುಣಮಟ್ಟ ಹಾಗೂ ಜ್ಞಾನದ ಕೌಶಲ್ಯ ಹೆಚ್ಚಾಗಲು ಸಹಕಾರಿಯಾಗುತ್ತವೆ ಎಂದು ವಿಜ್ಞಾನ ವಿಭಾಗದ ಪರಿವೀಕ್ಷಕರಾದ ವಸಂತ ಕುಮಾರಿ ತಿಳಿಸಿದರು. ನಗರದ ಶ್ರೀ ಸೋಮೇಶ್ವರ ವಿದ್ಯಾಲಯದ ಪೂರ್ವ ಪ್ರಾಥಮಿಕ ಹಂತದ ಮಕ್ಕಳಿಗೆ ನಡೆದ ವಸ್ತು ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳು ಮೊಬೈಲ್ ಬಳಕೆ ಕಡಿಮೆ ಮಾಡಬೇಕು, ಗಿಡಗಳನ್ನು ನೆಟ್ಟು ಬೆಳೆಸಬೇಕು. ಅಲ್ಲದೆ ಮಕ್ಕಳು ಪೋಷಕರು ಹಾಗೂ ಶಿಕ್ಷಕರ ಸಲಹೆ, ಮಾರ್ಗದರ್ಶನ ಪಾಲಿಸಿ ಉತ್ತಮ ಪ್ರಜೆಗಳು ಹಾಗೂ ಸಾಧಕರಾಗಬೇಕೆಂದರು

ಪಾಠದ ಜೊತೆ ಇಂತಹ ವಸ್ತು ಪ್ರದರ್ಶನ ಏರ್ಪಡಿಸುವುದರಿಂದ ಕಲಿಕಾ ಗುಣಮಟ್ಟ ಕೂಡ ಹೆಚ್ಚಾಗುತ್ತದೆ, ಮಕ್ಕಳಿಗೆ ಪ್ರಾಯೋಗಿಕವಾಗಿ ಹಲವು ವಿಷಯಗಳನ್ನು ಕಲಿಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ವಸ್ತು ಪ್ರದರ್ಶನದಲ್ಲಿ ಮಕ್ಕಳು ಮಾಡಿದ್ದ ಮಾದರಿಗಳು ಎಲ್ಲರ ಗಮನ ಸೆಳೆದವು. ಈ ವೇಳೆ ಪ್ರಾಂಶುಪಾಲರಾದ ಶ್ರೀಮತಿ ಎನ್. ಪ್ರಭಾವತಿ, ಆಡಳಿತಾಧಿಕಾರಿ ಹರೀಶ್‌ಬಾಬು, ಮುಖ್ಯೋಪಾಧ್ಯಾಯರಾದ ಶ್ರೀಮತಿ ಗಾಯತ್ರಿ, ಶ್ರೀಮತಿ ಮಾಲಾ, ತೀರ್ಪುಗಾರರಾದ ನಾಗವೀಣ, ಲಕ್ಷ್ಮಿ, ತೇಜಸ್ವಿನಿ, ಅನಿತಾ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಕ್ಕಳನ್ನು ಮೊಬೈಲ್ ಮುಕ್ತರನ್ನಾಗಿಸಲು ಕರೆ



**ಆಕ್ಸ್‌ಫರ್ಡ್ ಇಂಗ್ಲಿಷ್ ಮೀಡಿಯಮ್ ಪ್ರೈಮರಿ ಮತ್ತು ಹೈಸ್ಕೂಲ್‌ನ ಬೆಳಕು ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ**

ದಾವಣಗೆರೆ, ಜ. 16 - ಇಂದಿನ ಮಕ್ಕಳಲ್ಲಿ ಓದುವ, ಬರೆಯುವ ಆಸಕ್ತಿ ಕ್ಷೀಣಿಸುತ್ತಿದೆ. ಬದಲಾಗಿ ಮೊಬೈಲ್ ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಇದರಿಂದ ಅವರ ವಿವೇಚನಾ ಶಕ್ತಿ, ಆಲೋಚನಾ ಸಾಮರ್ಥ್ಯ ಕುಗ್ಗುತ್ತಿದೆ. ಹಾಗಾಗಿ ನಮ್ಮ ಮಕ್ಕಳನ್ನು ಮೊಬೈಲ್ ಮುಕ್ತರನ್ನಾಗಿಸಿ ಅವರ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಜವಾಬ್ದಾರಿ ವಹಿಸಿ, ಮುಂದಿನ ಅವರ ಭವಿಷ್ಯಕ್ಕೆ ದಾರಿದೀಪವಾಗಬೇಕೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಪೋಷಕರಿಗೆ ಕರೆಕೊಟ್ಟರು.

ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ಮೊನ್ನೆ ನಡೆದ ಆಕ್ಸ್‌ಫರ್ಡ್ ಇಂಗ್ಲಿಷ್ ಮೀಡಿಯಮ್ ಪ್ರೈಮರಿ ಮತ್ತು ಹೈಸ್ಕೂಲ್‌ನ ಬೆಳಕು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಅಭ್ಯಾಸದಲ್ಲಿ ನಿರಂತರತೆ ಕಾಪಾಡಿಕೊಳ್ಳಿ, ಶ್ರದ್ದೆ ಹಾಗೂ ಕಠಿಣ ಪರಿಶ್ರಮದಿಂದ ನೀವು ಅಭ್ಯಸಿಸಿದರೆ ನಿಮ್ಮ ಗುರಿಮುಟ್ಟಬಹುದು ಎಂದು ಹೇಳುತ್ತಾ ಮಕ್ಕಳನ್ನು ಪ್ರೋತ್ಸಾಹಿಸಿದರು. ಹಾಗೇ ಪೋಷಕರು ಮಕ್ಕಳ ಮೇಲೆ ಅತಿಯಾದ ಒತ್ತಡ ಹೇರದೆ ಸರಿಯಾದ ಮಾರ್ಗದರ್ಶನ ಮಾಡಬೇಕೆಂದು ತಿಳಿಸುತ್ತಾ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಜವಾಬ್ದಾರಿ ಹೆಚ್ಚಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜಿ.ಕೊಟ್ರೇಶ್, ಅವರು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಜವಾಬ್ದಾರಿಯಲ್ಲಿ ಶಿಕ್ಷಕರು ಹಾಗೂ ಪೋಷಕರ ಜವಾಬ್ದಾರಿ ಹೆಚ್ಚಾಗಿರುತ್ತದೆ. ಮನೆಯಲ್ಲಿ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಪೋಷಕರು ಹೆಚ್ಚು ಮಹತ್ವ ಕೊಡಬೇಕೆಂದು ತಿಳಿಸಿದರು.

ಇನ್ನೋರ್ವ ಮುಖ್ಯ ಅತಿಯಾಗಿ ಆಗಮಿಸಿದ್ದ ಶಿವ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಮಾಗನೂರು ಸಂಗಮೇಶ ಗೌಡ್ರು ಮಕ್ಕಳ ವಿದ್ಯಾಭ್ಯಾಸದ ಕುರಿತು ಹಿತ ವಚನ ನೀಡಿದರು.

ಸಂಸ್ಥೆಯ ಕಾರ್ಯದರ್ಶಿ ಕೆ.ಸಿ. ಲಿಂಗರಾಜ್ ಸಂಸ್ಥೆ ನಡೆದು ಬಂದ ದಾರಿಯನ್ನು ವಿವರಿಸಿದರು. ಶಿಕ್ಷಕಿ ರೇಷ್ಮಾ ಸ್ವಾಗತಿಸಿದರು. ಶಾಲಾ ಮಕ್ಕಳು ಪ್ರಾರ್ಥನೆ ನೆರವೇರಿಸಿದರು. ಶಿಕ್ಷಕಿ ಮೇಘನಾ ನಿರೂಪಿಸಿದರು.

# ಭತ್ತ ಸಂಸ್ಕರಣಾದಾರರ ಸಂಘ ಅಸ್ತಿತ್ವಕ್ಕೆ



ದಾವಣಗೆರೆ, ಜ.16- ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಭತ್ತ ಸಂಸ್ಕರಣಾದಾರರ ಸಂಘ ಇಂದು ಅಸ್ತಿತ್ವಕ್ಕೆ ಬಂದಿದ್ದು, ಅದರ ಉದ್ಘಾಟನಾ ಸಮಾರಂಭ ನಗರದ ಬಂಬೂ ಬಜಾರ್‌ನಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ರೈಸ್ ಮಿಲ್ ಮಾಲೀಕರ ಸಂಘದ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಮತ್ತು ವರ್ತಕ ಜಿ.ಎಸ್. ಉಳುವಯ್ಯ ನೆರವೇರಿಸಿದರು. ಪ್ರಥಮ ಅಧ್ಯಕ್ಷರಾಗಿ ಎಚ್.ಎಂ. ನಾಗರಾಜ್, ಉಪಾಧ್ಯಕ್ಷರು ಜಬಿ ಉಮೇಶ್, ಗೌ. ಅಧ್ಯಕ್ಷರಾಗಿ ಎಂ. ದೊಡ್ಡಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಎ. ರಮೇಶ್, ಖಜಾಂಚಿಯಾಗಿ ನಾಗರಾಜ್ ಸಜ್ಜನ್, ಸಹಕಾರದರ್ಶಿಯಾಗಿ ಶ್ರೀಧರ್‌ಗೌಡ ಎಸ್.ಆರ್.ಎ ಇವರುಗಳು ಅವಿರೋದವಾಗಿ ಆಯ್ಕೆಯಾದರು.

ಭತ್ತದ ವ್ಯಾಪಾರಸ್ಥರಿಗೆ ಆಗುವ ಕೆಲವು ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಈ ಬಗ್ಗೆ ಅನೇಕ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಾಗಿ ನೂತನ ಅಧ್ಯಕ್ಷ ಎಚ್.ಎಂ. ನಾಗರಾಜ್ ತಿಳಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ಕ್ಲಬ್ ಅಧ್ಯಕ್ಷ ಎ.ಬಿ. ಚಂದ್ರಶೇಖರ್, ಕೋರಿ ಹಿರಿಯಣ್ಣ, ಟಿ.ಸಿ. ಲಿಂಗಪ್ಪ, ಮಳಗಿ ಪರಪ್ಪ, ಮಹಾದೇವಯ್ಯ, ಭಾರಿಮನಿ ಷಣ್ಮುಖಪ್ಪ, ರಸೂಲ್ ಖಾನ್ ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಿರ್ದೇಶಕರಾದ ಕುಂಟೋಜಿ ಚನ್ನಪ್ಪ, ಸುರೇಶ್ ಬಾಬು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಎ.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ನಿರೂಪಿಸಿದರು.

# ಇಂದಿರಾಗಾಂಧಿ ಮುಕ್ತ ವಿವಿಯಿಂದ ಅರ್ಜಿ

ದಾವಣಗೆರೆ, ಜ.16- ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದಿಂದ ವಿವಿಧ ಕೋರ್ಸುಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ವಿವಿಯ ಸಹಾಯಕ ಪ್ರಾದೇಶಿಕ ನಿರ್ದೇಶಕ ಡಾ.ಷಣ್ಮುಗಂ ಹೇಳಿದರು. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಪ್ಲೋಮಾ, ಪಿ.ಜಿ. ಡಿಪ್ಲೋಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿಗಾಗಿ ಆಸಕ್ತರು ಅರ್ಜಿ ಸಲ್ಲಿಸಬಹುದಾಗಿದೆ. ಎಂಬಿಎಗೆ ಪ್ರವೇಶ ಪರೀಕ್ಷೆ ಇಲ್ಲದೇ ನೇರ ಪ್ರವೇಶ ನೀಡಲಾಗುವುದು.

ಎಸ್ಸಿ/ಎಸ್ಟಿ ಜನಾಂಗಕ್ಕೆ ಪ್ರವೇಶ ಶುಲ್ಕ ಉಚಿತವಿದೆ. ಒಬಿಸಿ ಹಾಗೂ ವಿಕಲಾಂಗ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಶುಲ್ಕ ಮರುಪಾವತಿ ಸೌಲಭ್ಯವಿದ್ದು, ವಿದ್ಯಾರ್ಥಿಗಳು, ಗೃಹಿಣಿಯರು, ನೌಕರರು, ಶಿಕ್ಷಣ ಅರ್ಧಕ್ಕೆ ಸ್ಥಗಿತಗೊಳಿಸಿದವರು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಅವರು ಕರೆ ನೀಡಿದರು. ಕಲಿಕಾಸಕ್ತಿಯುಳ್ಳವರಿಗಾಗಿ 230 ವಿವಿಧ ಕೋರ್ಸುಗಳು ಲಭ್ಯವಿವೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಗನುಸಾರ ನಾಲ್ಕು ವರ್ಷಗಳ ಪದವಿ ಮಾಡಬಹುದಾಗಿದ್ದು, ಇದೇ ಆಸಕ್ತಿ ಇರುವ ಬೇರೆ ವಿಷಯಗಳನ್ನೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ.

ಆಸಕ್ತರು https://ignouadmission.samarth.edu.inಗೆ ಭೇಟಿ ನೀಡಿ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಮೂಲಕ ಜನವರಿ 31ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ವಿವರಗಳಿಗೆ ವಾಟ್ಸಾಪ್ ಸಂಖ್ಯೆ 9449337272 ಅಥವಾ 080-29607272ಕ್ಕೆ ಕರೆ ಮಾಡಬಹುದು. ಹಾಗೂ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿನ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಬಹುದಾಗಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಂಯೋಜಕ ಡಾ.ಅಶೋಕ್ ಉಪಸ್ಥಿತರಿದ್ದರು.

# ಕದಳಿ ಮಹಿಳಾ ವೇದಿಕೆ ಜಿಲ್ಲಾಧ್ಯಕ್ಷರಾಗಿ ಗಾಯತ್ರಿ ವಸ್ತ್ರದ್

## ಕಾರ್ಯದರ್ಶಿಯಾಗಿ ಚಂದ್ರಿಕಾ ಮಂಜುನಾಥ್



ದಾವಣಗೆರೆ, ಜ. 16- ಜಿಲ್ಲಾ ಕದಳಿ ಮಹಿಳಾ ವೇದಿಕೆಯ 2024-25 ನೇ ಸಾಲಿನ ಅಧ್ಯಕ್ಷರಾಗಿ ಶ್ರೀಮತಿ ಗಾಯತ್ರಿ ವಸ್ತ್ರದ್, ಕಾರ್ಯದರ್ಶಿಯಾಗಿ ಶ್ರೀಮತಿ ಚಂದ್ರಿಕಾ ಮಂಜುನಾಥ್ ಆಯ್ಕೆಯಾಗಿದ್ದಾರೆ.

ಶ್ರೀಮತಿ ಯಶಾ ದಿನೇಶ್ (ಗೌರವ ಸಲಹೆಗಾರರು), ಗಾಯತ್ರಿ ವಸ್ತ್ರದ್ (ಜಿಲ್ಲಾ ಘಟಕದ ಅಧ್ಯಕ್ಷರು), ಚಂದ್ರಿಕಾ ಮಂಜುನಾಥ್ (ಜಿಲ್ಲಾ ಕಾರ್ಯದರ್ಶಿ), ರತ್ನಾ ಸಿ.ರೆಡ್ಡಿ (ಖಜಾಂಚಿ), ಸೌಮ್ಯ ಸತೀಶ್, ವಾಣಿ ರಾಜ್, ಲಕ್ಷ್ಮಿ ಮಲ್ಲಿಕಾರ್ಜುನ್ (ಸಹ ಕಾರ್ಯದರ್ಶಿಗಳು) ಆಯ್ಕೆಯಾಗಿದ್ದಾರೆ.

**ತಾಲ್ಲೂಕು ಘಟಕ** : ಮಮತಾ ನಾಗರಾಜ್ (ಅಧ್ಯಕ್ಷರು), ವಿಜಯ ಚಂದ್ರಶೇಖರ್ , (ಉಪಾಧ್ಯಕ್ಷರು), ವಸಂತ (ಕಾರ್ಯದರ್ಶಿ), ವಿಜಯಲಕ್ಷ್ಮಿ ಬಸವರಾಜ್ (ಖಜಾಂಚಿ), ಪೂರ್ಣಿಮಾ ಪ್ರಸನ್ನ ಕುಮಾರ್, ನಂದಿನಿ ಗಂಗಾಧರ್ (ಸಹ ಕಾರ್ಯದರ್ಶಿಗಳು) ನೇಮಕಗೊಂಡಿದ್ದಾರೆ. ನಿರ್ದೇಶಕರುಗಳನ್ನಾಗಿ ಯಶಾ ದಿನೇಶ್, ಪ್ರಮೀಳಾ ನಟರಾಜ್, ಸುಜಾತ ರವೀಂದ್ರ, ಪಲ್ಲವಿ ಪಾಟೀಲ್, ಆಶಾ ಎಂ. ಪಾಟೀಲ್ ಅವರುಗಳನ್ನು ನೇಮಕ ಮಾಡಲಾಗಿದೆ.

## ಮೊಲಾಸಸ್ ರಫ್ತಿನ ಮೇಲೆ ಶೇ.50ರ ತೆರಿಗೆ

ನವದೆಹಲಿ, ಜ. 16 - ಕೇಂದ್ರ ಸರ್ಕಾರ ಮೊಲಾಸಸ್ ರಫ್ತು ಮೇಲೆ ಶೇ.50ರ ತೆರಿಗೆ ವಿಧಿಸಿದೆ. ಸಕ್ಕರೆ ಉಪ ಉತ್ಪನ್ನವಾದ ಮೊಲಾಸಸ್ ಅನ್ನು ಎಥೆನಾಲ್ ಉತ್ಪಾದಿಸಲು ಬಳಸಲಾಗುತ್ತದೆ. ಈ ತೆರಿಗೆ ಹೇರಿಕೆ ಜನವರಿ 18ರಿಂದ ಜಾರಿಗೆ ಬರಲಿದೆ.

# ರಾಜ್ಯ ಪತ್ರಕರ್ತರ ಸಮ್ಮೇಳನದ ಯಶಸ್ಸಿಗೆ ಟೊಂಕಕಟ್ಟಿ ನಿಲ್ಲಿ

ದಾವಣಗೆರೆ, ಜ.16- ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಈವರೆಗೂ ನಡೆದ ರಾಜ್ಯ ಮಟ್ಟದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಮ್ಮೇಳನ ಒಂದಕ್ಕಿಂತ ಒಂದು ವಿಭಿನ್ನವಾಗಿ ನಡೆದಿದ್ದು, ಫೆಬ್ರವರಿ 3 ಮತ್ತು 4 ರಂದು ರಾಜ್ಯದ ಕೇಂದ್ರ ಬಿಂದು ದಾವಣಗೆರೆಯಲ್ಲಿ ನಡೆಯಲಿರುವ ಸಮ್ಮೇಳನ ಅತ್ಯಂತ ಮಹತ್ವ ಪಡೆದಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಹೇಳಿದರು.

ನಗರದ ಮಹಾನಗರ ಪಾಲಿಕೆ ಆವರಣದಲ್ಲಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಕಚೇರಿಯಲ್ಲಿ ನಿನ್ನೆ ನಡೆದ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮೈಸೂರು, ಮಂಗಳೂರು, ಕಲ್ಬುರ್ಗಿ ಮತ್ತು ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ನಡೆದ ಸಮ್ಮೇಳನಗಳು ಅಭೂತಪೂರ್ವವಾಗಿ ನಡೆದಿವೆ. ಮಾತ್ರವಲ್ಲ, ವಿಚಾರಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಮ್ಮೇಳನದ ವಿವಿಧ ಸಮಿತಿಗಳು ಅತಿಥಿಗಳಿಗೆ ನೀಡಿದ ಆತಿಥ್ಯ ಮತ್ತೆ ಮತ್ತೆ ನೆನಪು ಮಾಡುತ್ತಿವೆ.



ಪೂರ್ವಭಾವಿ ಸಭೆಯಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಕರೆ

ಅದಕ್ಕಿಂತ ಹೆಚ್ಚು ನೆನಪು ಮಾಡುವಂತಹ ದಾವಣಗೆರೆ ಸಮ್ಮೇಳನ ಆಗಬೇಕು. ಇದಕ್ಕೆಲ್ಲ ಜಿಲ್ಲೆಯ ಪತ್ರಕರ್ತರು ಟೊಂಕಕಟ್ಟಿ ನಿಲ್ಲಬೇಕೆಂದು ಕಿವಿಮಾತು ಹೇಳಿದರು.

ಮೈಸೂರಿನಲ್ಲಿ ನಡೆದ ಸಮ್ಮೇಳನ ದಸರಾ ವೈಭವದಂತೆ ನಡೆಯಿತು. ಅದೇ ರೀತಿಯಾಗಿ ಮಂಗಳೂರಿನಲ್ಲೂ ಅದ್ಧೂರಿಯಾಗಿ ನಡೆಯಿತು. ಇದಕ್ಕಿಂತ ಭಿನ್ನವಾಗಿ ದಾವಣಗೆರೆ ಸಮ್ಮೇಳನ ನಡೆಯಬೇಕೆಂಬುದು ನಮ್ಮ ಮನದಾಸೆಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ವೃತ್ತಿ ಬಾಂಧವರಿಗೆ ವಾರ್ಷಿಕ ಪ್ರಶಸ್ತಿ, ಇಲ್ಲಿನ ಸ್ಥಳೀಯ 60 ವರ್ಷ ಮೇಲ್ಪಟ್ಟವರನ್ನು ಸನ್ಮಾನ ಮಾಡಬೇಕೆಂದು ನಿರ್ಧರಿಸಲಾಗಿದೆ.

ಇನ್ನು ಸಮ್ಮೇಳನ ಕೇವಲ 15 ದಿನ ಉಳಿದಿರುವುದರಿಂದ ಪ್ರತಿಯೊಂದು ಸಮಿತಿಗಳಿಗೆ ಮಹತ್ವದ ಜವಾಬ್ದಾರಿ ಇದೆ. ಪ್ರಮುಖವಾಗಿ ವಸತಿ, ಊಟೋಪಚಾರದಲ್ಲಿ ಯಾವುದೇ ತೊಂದರೆಯಾಗದಂತೆ ಸಮರ್ಥವಾಗಿ ನಿಭಾಯಿಸಬೇಕೆಂದು ಸಲಹೆ ನೀಡಿದರು.

ಸಮ್ಮೇಳನದ ಯಶಸ್ಸಿಗೆ ಜಿಲ್ಲೆಯ ಪ್ರತಿಯೊಬ್ಬ ಪತ್ರಕರ್ತರು ಸ್ವಯಂಪ್ರೇರಿತವಾಗಿ ತಮ್ಮ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಯಾವುದೇ ಟೀಕೆ, ಟಿಪ್ಪಣಿ ಮಾಡದೆ ಒಗ್ಗಟ್ಟಿನಿಂದ, ಬದ್ಧತೆಯಿಂದ ಕೆಲಸ ಮಾಡಬೇಕೆಂದು ಸೂಚಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್ ಮಾತನಾಡಿ, ದಾವಣಗೆರೆಯಲ್ಲಿ ಸಮ್ಮೇಳನ ನಡೆಯಬೇಕೆಂದು ಹಠಕ್ಕೆ ಬಿದ್ದು, ತೆಗೆದುಕೊಂಡು ಬಂದಿದ್ದೇವೆ. ಯಾವುದೇ ಚ್ಯುತಿ ಬಾರದಂತೆ ಸಮ್ಮೇಳನ ಯಶಸ್ಸಿಗೆ ಪ್ರತಿಯೊಬ್ಬರೂ ಸಹಕರಿಸಬೇಕೆಂದು ಮನವಿ ಮಾಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಧಾನ ಕಾರ್ಯದರ್ಶಿ ಎ.ಫಕೃದ್ದೀನ್ ಸ್ವಾಗತಿಸಿದರೆ, ಖಜಾಂಚಿ ಎನ್.ವಿ. ಬದರಿನಾಥ್ ವಂದಿಸಿದರು.

ಹಿರಿಯ ಪತ್ರಕರ್ತರಾದ ಎಚ್.ಬಿ. ಮಂಜುನಾಥ್, ಬಿ.ಎನ್.ಮಲ್ಲೇಶ್, ಮಂಜುನಾಥ್ ಗೌರಕ್ಕಳವರ, ಬಾ.ಮ. ಬಸವರಾಜಯ್ಯ, ಸದಾನಂದ ಹೆಗಡೆ, ಎಂ.ಬಿ.ನವೀನ್, ನಾಗರಾಜ್ ಬಡದಾಳ್, ಮಲ್ಲಿಕಾರ್ಜುನ್ ಕಬ್ಬೂರು, ಆರ್. ರವಿಬಾಬು, ಕಾನಿಪ ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ. ಒಡೆಯರ್ ಸೇರಿದಂತೆ ಇನ್ನಿತರರು ಸಭೆಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭೆಯ ನಂತರ ಸಮ್ಮೇಳನದ ಹಣಕಾಸು, ವಸತಿ, ಆಹಾರ, ಆರೋಗ್ಯ, ಸಾರಿಗೆ ಸೇರಿದಂತೆ ವಿವಿಧ ಸಮಿತಿಗಳ ಸಮ್ಮೇಳನ ನಿರ್ವಹಣೆ ಬಗ್ಗೆ ಗಂಭೀರವಾಗಿ ಚರ್ಚೆ ನಡೆಸಲಾಯಿತು.


# ಸರಳವಾಗಿ ಜನ್ಮ ದಿನ ಆಚರಿಸಿಕೊಂಡ ಎಸ್‌ವಿಆರ್



ದಾವಣಗೆರೆ, ಜ. 16- ಜಗಳೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಸ್.ವಿ ರಾಮಚಂದ್ರ ಅವರು ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ತಮ್ಮ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಿಕೊಂಡರು.

ಕಳೆದ ವರ್ಷ ತಮ್ಮ ಜನ್ಮ ದಿನವನ್ನು ಅಭಿಮಾನಿಗಳ ಮಧ್ಯೆ ಅದ್ಧೂರಿಯಾಗಿ ಆಚರಿಸಿಕೊಂಡಿದ್ದ ಮಾಜಿ ಶಾಸಕರು, ಕ್ಷೇತ್ರದಲ್ಲಿ ಬರ ಪರಿಸ್ಥಿತಿ ಉಂಟಾಗಿರುವುದರಿಂದ ಅಭಿಮಾನಿಗಳ ಸಮ್ಮುಖದಲ್ಲಿ ತಮ್ಮ ಸ್ವಗೃಹದಲ್ಲಿ ಸರಳವಾಗಿ ತಮ್ಮ ಜನ್ಮ ದಿನ ಆಚರಿಸಿಕೊಂಡರು. ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಸೇರಿದಂತೆ ಅನೇಕ ಅಭಿಮಾನಿಗಳು ಕಾರ್ಯಕರ್ತರು, ಬಿಜೆಪಿ ಮುಖಂಡರು ಭೇಟಿ ನೀಡಿ ರಾಮಚಂದ್ರ ಅವರಿಗೆ ಶುಭ ಕೋರಿದರು.

# ರಾಮ ಮಂದಿರಕ್ಕೆ ಶಿಲಾನ್ಯಾಸ ನೆರವೇರಿಸಿದ್ದು ರಾಜೀವ್ ಗಾಂಧಿ



ಪುಣೆ, ಜ. 16 – ರಾಜೀವ್ ಗಾಂಧಿ ಅವರು ಪ್ರಧಾನ ಮಂತ್ರಿಯಾಗಿದ್ದ ಸಮಯದಲ್ಲಿ ಅಯೋಧ್ಯೆಯಲ್ಲಿ ರಾಮ ಮಂದಿರಕ್ಕೆ ಶಿಲಾನ್ಯಾಸ ನೆರವೇರಿಸಲಾಗಿತ್ತು. ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು ಈ ವಿಷಯದಲ್ಲಿ ರಾಜಕೀಯ ಮಾಡುತ್ತಿವೆ ಎಂದು ಎನ್.ಸಿ.ಪಿ. ಅಧ್ಯಕ್ಷ ಶರದ್ ಪವಾರ್ ಹೇಳಿದ್ದಾರೆ.

ಕರ್ನಾಟಕದ ನಿಪ್ಪಾಣಿಯಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು. ಅಯೋಧ್ಯೆ ರಾಮ ಮಂದಿರಕ್ಕೆ ಜನವರಿ 22ರಂದು ಪ್ರಾಣ ಪ್ರತಿಷ್ಠಾಪನೆ ನೆರವೇರಲಿದೆ.

ಅಯೋಧ್ಯೆಯಲ್ಲಿ ರಾಜೀವ್ ಗಾಂಧಿ ಶಿಲಾನ್ಯಾಸ ನೆರವೇರಿಸಿದ್ದರು. ಆದರೆ, ಬಿಜೆಪಿ ಮತ್ತು ಆರ್.ಎಸ್.ಎಸ್.ಗಳು ರಾಮ ದೇವರ ಹೆಸರಿನಲ್ಲಿ ರಾಜಕೀಯ ಮಾಡುತ್ತಿವೆ ಎಂದವರು ಆರೋಪಿಸಿದರು.

## ನಮೀಬಿಯಾದ ಹತ್ತನೇ ಚೀತಾ ಸಾವು

ಭೂಪಾಲ್, ಜ. 16 - ನಮೀಬಿಯಾದಿಂದ ತರಿಸಲಾಗಿದ್ದ ಶೌರ್ಯ ಹೆಸರಿನ ಚೀತಾ ಮಧ್ಯ ಪ್ರದೇಶದ ಕುನ್ನೊ ರಾಷ್ಟ್ರೀಯ ಉದ್ಯಾನದಲ್ಲಿ ಸಾವನ್ನಪ್ಪಿದೆ. ಆಫ್ರಿಕಾದಿಂದ ತರಿಸಲಾಗಿದ್ದ ಚೀತಾಗಳ ಪೈಕಿ ಹತ್ತು ಇದುವರೆಗೂ ಸತ್ತಿವೆ. 2022ರಲ್ಲಿ ಚೀತಾಗಳನ್ನು ತರಿಸಲಾಗಿತ್ತು. ಚೀತಾ ಸಾವಿಗೆ ಕಾರಣವೇನು ಎಂಬುದು ಸ್ಪಷ್ಟವಾಗಿಲ್ಲ. ಈ ಬಗ್ಗೆ ತಿಳಿಯಲು ಮರಣೋತ್ತರ ಪರೀಕ್ಷೆ ನಡೆಸಲಾಗುವುದು.

# ಮಿಟ್ಲಕಟ್ಟೆಯಲ್ಲಿ 23 ರಂದು ಶ್ರೀ ಕರಿಯಮ್ಮದೇವಿ ಜಾತ್ರೆ

ದಾವಣಗೆರೆ, ಜ.16- ಹರಿಹರ ತಾಲ್ಲೂಕಿನ ಮಿಟ್ಲಕಟ್ಟೆ ಗ್ರಾಮದಲ್ಲಿ ಇದೇ ದಿನಾಂಕ 23 ರ ಮಂಗಳವಾರ ಶ್ರೀ ಕರಿಯಮ್ಮದೇವಿ ಜಾತ್ರೆ ನಡೆಯಲಿದೆ.

ದಿನಾಂಕ 21 ನೇ ಭಾನುವಾರ ಗಂಗಾಪೂಜೆ, ಹಂದರಗಂಬ ಪೂಜೆ, ದಿನಾಂಕ 22 ನೇ ಸೋಮವಾರ ಕಂಕಣಧಾರಣೆ ನಡೆಯಲಿದೆ.

ದಿನಾಂಕ 23 ನೇ ಮಂಗಳವಾರ ಶ್ರೀ ಕರಿಯಮ್ಮ ದೇವಿ ರಥೋತ್ಸವ ನಡೆಯುವುದು. ದಿನಾಂಕ 24 ನೇ ಬುಧವಾರ ಚರಗ ಚೆಲ್ಲುವುದು, ಹರಕೆ ಒಪ್ಪಿಸುವುದು, ಬಾಯಿಬೀಗ, ಬೇವು ಇತ್ಯಾದಿ ಕಾರ್ಯಕ್ರಮಗಳು ನಡೆಯುವವು. ದಿನಾಂಕ 25 ನೇ ಗುರುವಾರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು. ದಿನಾಂಕ 26ನೇ ಶುಕ್ರವಾರ ಉಡಿ ತುಂಬುವುದು, ಮಹಾಮಂಗಳಾರತಿ ನಡೆಯಲಿದೆ.


MAHA TVS WANTED



Sales Executives Qualification : Diploma in Automobile or Mechanical, ITI Candidates

Experience in 2 wheeler sales, good in communication

CONTACT : MAHA AUTOMOBILE

#5961, Opp. Vani Rice Mill, Shivakumara, Swamy Layout, Hadadi Road, Davanagere.

M. : 83100 44980, 95917 72021


# ಅಯೋಧ್ಯೆ : ರಾಮ ಭಜನೆಗೆ ಕರೆ ನೀಡಿದ ಗಾಯಕಿ ಚಿತ್ರಾಗೆ ಆನ್‌ಲೈನ್ ದೂಷಣೆ

ತಿರುವನಂತಪುರಂ, ಜ. 16 – ಜನವರಿ 22ರಂದು ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ ನೆರವೇರುವ ವೇಳೆ ರಾಮ ಭಜನೆ ಮಾಡುವಂತೆ ಕರೆ ನೀಡಿದ್ದ ರಾಷ್ಟ್ರ ಪ್ರಶಸ್ತಿ ವಿಜೇತ ಗಾಯಕಿ ಕೆ.ಎಸ್. ಚಿತ್ರ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ದೂಷಣೆಗಳು ಎದುರಾಗಿವೆ.

ಎರಡು ದಿನಗಳ ಹಿಂದೆ ಸಂಕ್ಷಿಪ್ತ ವಿಡಿಯೋ ಒಂದನ್ನು ಬಿಡುಗಡೆ ಮಾಡಿದ್ದ ಗಾಯಕಿ ಚಿತ್ರ, ಪ್ರತಿಯೊಬ್ಬರು ಶ್ರೀ ರಾಮ ಮಂತ್ರ ಜಪಿಸಬೇಕೆಂದು ಕರೆ ನೀಡಿದ್ದರು. ಪ್ರಾಣ ಪ್ರತಿಷ್ಠಾಪನೆಯ ದಿನದಂದು ಸಂಜೆ ದೀಪಗಳನ್ನು ಬೆಳಗುವಂತೆಯೂ ಕರೆ ನೀಡಿದ್ದರು.

ಸಾಮಾಜಿಕ ಜಾಲತಾಣದ ಒಂದು ವರ್ಗ ಚಿತ್ರ ಅವರ ವಿಡಿಯೋಗೆ ಆಕ್ಷೇಪಿಸಿದೆ. ಅವರು ರಾಮ ಮಂದಿರ ಬೆಂಬಲಿಸಬಾರದಿತ್ತು, ಈ ರೀತಿಯ ಹೇಳಿಕೆ ನೀಡಬಾರದಿತ್ತು ಎಂದಿದ್ದಾರೆ. ಗಾಯಕಿ ವಿರುದ್ಧ ಅವಹೇಳನ ಮಾಡಲಾಗಿದೆ. ಚಿತ್ರ ಅವರು ತಮ್ಮ ಮನೆಗೆ ಸೀಮಿತವಾಗಿ ಸಂಪ್ರದಾಯ ಆಚರಿಸಬೇಕು. ಅವರು ಹತ್ಯಾಕಾಂಡ ಹಾಗೂ ಜನಾಂಗೀಯವಾದವನ್ನು ಸಂಭ್ರಮಿಸಲು ಕರೆ ನೀಡುತ್ತಿದ್ದಾರೆ ಎಂದು ಲೇಖಕಿ ಇಂದು ಮೆನನ್ ಹೇಳಿದ್ದಾರೆ. ಆದರೆ, ಕೇರಳದ ಆಡಳಿತಾರೂಢ ಸಿಪಿಐ (ಎಂ), ಪ್ರತಿಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿಗಳು ಗಾಯಕಿ ಬೆಂಬಲಕ್ಕೆ ಬಂದಿವೆ. ಚಿತ್ರ ಅವರು ತಮ್ಮ ನಿಲುವನ್ನು ತಿಳಿಸುವ ಹಕ್ಕು ಹೊಂದಿದ್ದಾರೆ ಎಂದು ಪಕ್ಷಗಳು ಹೇಳಿವೆ.

ಇತ್ತೀಚೆಗೆ ಬಿಜೆಪಿ ತ್ರಿಸ್ಸೂರಿನಲ್ಲಿ ಆಯೋಜಿಸಿದ್ದ ಮಹಿಳಾ ಸಬಲೀಕರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಟಿ ಶೋಭನಾ ಅವರು ಟೀಕೆಗೆ ಗುರಿಯಾಗಿದ್ದರು.

## ದುರ್ಗಾಂಬಿಕ ಕ್ಯಾಂಪಿನಲ್ಲಿ ಇಂದು ದುರ್ಗಾಂಬಿಕ ಜಾತ್ರೆ

ದಾವಣಗೆರೆ ತಾಲ್ಲೂಕು ಮುದಹದಡಿ ಸಮೀಪದ ಶ್ರೀ ದುರ್ಗಾಂಬಿಕ ಕ್ಯಾಂಪಿನಲ್ಲಿ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವ ಇಂದು ಬೆಳಿಗ್ಗೆ 8.30 ಕ್ಕೆ ಮಕರ ಲಗ್ನದಲ್ಲಿ ಭಜನೆ, ಡೊಳ್ಳು, ಬ್ಯಾಂಡ್ ಸೆಟ್, ಕುಂಭ ಮೇಳದೊಂದಿಗೆ ಮೆರವಣಿಗೆ ಮೂಲಕ ಗಂಗಾಪೂಜೆ ಜರುಗಲಿದೆ.

## ಎನ್‌ಸಿಸಿ ವಿಶೇಷ ಭಾವೈಕ್ಯತಾ ಶಿಬಿರಕ್ಕೆ ಚಿನ್ಮಯಿ ಆಯ್ಕೆ



ದಾವಣಗೆರೆ, ಜ. 16- ಇದೇ ದಿನಾಂ ಕ 26 ರಂದು ದೆಹಲಿಯಲ್ಲಿ ನಡೆಯುವ ವಿಶೇಷ ರಾಷ್ಟ್ರೀಯ ಭಾವೈಕ್ಯತಾ ಶಿಬಿರಕ್ಕೆ ಎ.ಆರ್.ಜಿ. ಕಾಲೇಜಿನ ಅಂತಿಮ ಬಿ.ಎ. ವಿದ್ಯಾರ್ಥಿ ಎನ್.ಸಿ.ಸಿ ಕೆಡೆಟ್ ಎಂ.ಬಿ. ಚಿನ್ಮಯಿ 33 ಬೆಟಾಲಿಯನ್ ದಾವಣಗೆರೆಯಿಂದ ಆಯ್ಕೆಯಾಗಿದ್ದಾರೆ.

# ಹವಾಲಾದಲ್ಲಿ ಸಂಸದ ಸಿದ್ದೇಶ್ವರ ಭಾಗಿ ಆರೋಪ

## ವಿಚಾರಣೆಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ



ದಾವಣಗೆರೆ, ಜ. 16- ಸಂಸದ ಜಿ.ಎಂ. ಸಿದ್ದೇಶ್ವರ ಅವರು ಹವಾಲಾ ಹಗರಣದಲ್ಲಿ ಭಾಗಿಯಾಗಿರುವ ಆರೋಪ ಇದ್ದು, ವಿಚಾರಣೆ ನಡೆಸುವಂತೆ ಆಗ್ರಹಿಸಿ ಮಂಗಳವಾರ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿ, ಆದಾಯ ತೆರಿಗೆ ಇಲಾಖೆ ಪ್ರಾದೇಶಿಕ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ್ದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು, ಹದಡಿ ರಸ್ತೆಯಲ್ಲಿರುವ ಆದಾಯ ತೆರಿಗೆ ಇಲಾಖೆ ಪ್ರಾದೇಶಿಕ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಸಂಸದ ಸಿದ್ದೇಶ್ವರ ವಿರುದ್ಧ 500 ಕೋಟಿ ರೂ. ಹವಾಲಾ ಹಗರಣದ ಆರೋಪ ಕೇಳಿ ಬಂದಿದೆ. ಈ ವಿಷಯ ಸಾಮಾಜಿಕ ಜಾಲತಾಣಗಳಲ್ಲಿ, ಸುದ್ದಿ ವಾಹಿನಿಗಳಲ್ಲಿ ಹರಿದಾಡುತ್ತಿದ್ದರೂ, ಆದಾಯ ತೆರಿಗೆ ಹಾಗೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಅವರನ್ನು ಏಕೆ ವಿಚಾರಣೆಗೆ ಒಳಪಡಿಸುತ್ತಿಲ್ಲ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಪ್ರಶ್ನಿಸಿದರು.

ತಮ್ಮ ವಿರುದ್ಧ ಆರೋಪ ಮಾಡಿದರೆ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಸಂಸದರು ಹೇಳಿದ್ದಾರೆ.ಈ ಬೆದರಿಕೆಗೆ ನಾವೇನೂ ಹೆದರುವುದಿಲ್ಲ. ತಾವು ಯಾವುದೇ ತಪ್ಪು ಮಾಡಿಲ್ಲ ಎಂದಾದರೆ ಸಂಸದರು ವಿಚಾರಣೆಗೆ ಒಳಪಡಬೇಕು. ಸಂಸದರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು ಎಂದು ಬಸವರಾಜ್ ಆಗ್ರಹಿಸಿದರು.

1994ರಲ್ಲಿ ರಾಮಜ್ಯೋತಿ ಬಂದ ವೇಳೆ ಹುತಾತ್ಮರ ಹೆಸರಿನಲ್ಲಿ ಸಂಗ್ರಹಿಸಿದ ಕೋಟ್ಯಂತರ ರೂ. ಹಣವನ್ನು ಸಂಸದ ಸಿದ್ದೇಶ್ವರ, ಯಶವಂತರಾವ್ ಜಾಧವ್ ಹಾಗೂ ರಾಜನಹಳ್ಳಿ ಶಿವಕುಮಾರ್ ಲೂಟಿ ಮಾಡಿದ್ದಾರೆ. ಅಯೋಧ್ಯೆ ರಾಮಮಂದಿರ ನಿರ್ಮಾಣದ ವೇಳೆ ಮಂದಿರ ಕಟ್ಟಲು ಬೆಳ್ಳಿ ಇಟ್ಟಿಗೆ ನೀಡುವುದಾಗಿ ಹಣ ಸಂಗ್ರಹಿಸಿದ್ದರು. ಅಯೋಧ್ಯೆಗೆ ಬೆಳ್ಳಿ ಇಟ್ಟಿಗೆ ಕಳಿಸಿಕೊಡುವ ಕಾರ್ಯಕ್ರಮವನ್ನೂ ಆಯೋಜಿಸಿದ್ದರು. ಆದರೆ ಆ ಬೆಳ್ಳಿ ಇಟ್ಟಿಗೆಗಳು ಅಯೋಧ್ಯೆ ತಲುಪಿಲ್ಲ. ಅವು ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್ ಅವರ ಮನೆಗಳಲ್ಲೇ ಇವೆ ಎಂದು ಆರೋಪಿಸಿದರು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಹವಾಲಾ ದಂಧೆ ಆರೋಪದ ಹಿನ್ನೆಲೆಯಲ್ಲಿ ಸಿದ್ದೇಶ್ವರ ಅವರನ್ನು ತನಿಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಪಾಲಿಕೆ ಸದಸ್ಯರುಗಳಾದ ಗಡಿಗುಡಾಳ್ ಮಂಜುನಾಥ್, ಚಮನ್ ಸಾಬ್, ಹರಿಹರ ಮಾಜಿ ಶಾಸಕ ರಾಮಪ್ಪ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಅನಿತಾ ಬಾಯಿ ಮಾಲತೇಶ್, ಕೆಪಿಸಿಸಿ ಸದಸ್ಯ ರೇವಣಪ್ಪ, ಬ್ಲಾಕ್ ಅಧ್ಯಕ್ಷರಾದ ಕೆ.ಜಿ. ಶಿವಕುಮಾರ್, ಅಯೂಬ್, ಮೈನುದ್ದೀನ್, ಅಬ್ದುಲ್ ಲತೀಫ್, ಕೋಳಿ ಇಬ್ರಾಹಿಂ, ಎಲ್. ಎಂ.ಎಚ್. ಸಾಗರ್, ಯುವರಾಜ್, ಅಬ್ದುಲ್ ಜಬ್ಬಾರ್, ಶೇಖ್ ಅಹಮದ್ ಇತರರು ಪ್ರತಿಭಟನೆಯಲ್ಲಿದ್ದರು.